# 31ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯ ಬಂಧುಗಳೇ,

ಬ್ಯಾಂಕಿನ ಸನ್2023-24 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ 14.9.2024ನೇ ಶನಿವಾರ** ಬೆ.11.00 ಘಂ.ಗೆ ಶ್ರೀ ಚನ್ನಬಸವಸ್ವಾಮಿ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಗಿರಿಯಪ್ಪ ಹೊಸಕೇರಿ** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಕಾರಣ, ವಾರ್ಷಿಕ ಸಾಮಾನ್ಯ ಸಭೆಗೆ ಸಮಯಕ್ಕೆ ಸರಿಯಾಗಿ ಆಗಲಿಸಲು ಕೋರಲಾಗಿದೆ. ಪ್ರಾರ್ಥನೆ, ಸ್ವಾಗತ ಹಾಗೂ 2023-24 ರ ಅವಧಿಯಲ್ಲಿ ಮರಣ ಹೊಂದಿದ ಬ್ಯಾಂಕಿನ ಸದಸ್ಯರಿಗೆ ಶೃದ್ಧಾಂಜಲಿ ಸಲ್ಲಿಸುವುದು.

## ಸಭೆಯಲ್ಲಿ ಚರ್ಚಿಸಲಿರುವ ವಿಷಯಗಳು

**ವಿಷಯ :1)** 31ನೇ ಸರ್ವ ಸದಸ್ಯರ ಮಹಾಸಭೆ ನೋಟೀಸು ಓದಿ ದಾಖಲು ಮಾಡುವುದು

**ವಿಷಯ :2)** ಹಿಂದಿನ ಮಹಾಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವುದು.

**ವಿಷಯ :3)** ಮಂಡಳಿಯು ಸಲ್ಲಿಸಿದ ವಾರ್ಷಿಕ ವರದಿಯ ಪರಿಗಣನೆ.

**ವಿಷಯ :4)** ಲೆಕ್ಕಪರಿಶೋಧನಾ ವರದಿಯ ಮತ್ತು ಪರಿಶೋಧಿತ ಲೆಕ್ಕಗಳ ಪರಿಗಣನೆ.

**ವಿಷಯ :5)** ಲೆಕ್ಕಪರಿಶೋಧನಾ ವರದಿಯ ಪಾಲನಾ ವರದಿಯ ಪರಿಗಣನೆ.

**ವಿಷಯ :6)** ಲೆಕ್ಕಪರಿಶೋಧಕರ ಮತ್ತು ಆಂತರಿಕ ಲೆಕ್ಕ ಪರಿಶೋಧಕರ ನೇಮಕ.

**ವಿಷಯ :7)** ನಿವ್ವಳ ಲಾಭ ವಿಲೆ ಮಾಡುವುದು ಮತ್ತು ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದ ಇತರ ನಿಧಿಗಳ ಸೃಜನೆ

**ವಿಷಯ :8)** ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಮನರಾವಲೋಕನ.

**ವಿಷಯ :9)** ದೀರ್ಘಾವಧಿ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಗಳ ಅನುಮೋದನೆ.

**ವಿಷಯ :10)** 2024-25 ನೇ ಸಾಲಿನ ಪರಿಷ್ಕೃತ ಮತ್ತು 2025-26ನೇ ಸಾಲಿನ ವಾರ್ಷಿಕ ಬಜೆಟ್ (ಅಂದಾಜು)ಗಳ ಅನುಮೋದನೆ.

**ವಿಷಯ :11)** ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನಾರಾವಲೋಕನ.

**ವಿಷಯ :12)** ಇತರೆ ಸಹಕಾರಿಗಳಲ್ಲಿ ಹೊಂದಿರುವ ಸದಸ್ಯತ್ವದ ವರದಿ.

**ವಿಷಯ :13)** ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಬಗ್ಗೆ ಸಂಕ್ಷಿಪ್ತ ವರದಿ.

**ವಿಷಯ :14)** ಹಿಂದಿನ ವರ್ಷ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ಪಡೆಯುವುದು

**ವಿಷಯ: 15)** ಸೇವಾ ನಿವೃತ್ತಿ ಹೊಂದುತ್ತಿರುವ ಅಲ್ಲಮಪ್ರಭು, ಶ್ರೀಮತಿ ನಳಿನಿ ಇವರಿಗೆ ಸನ್ಮಾನಿಸಿ ಗೌರವಿಸುವುದು.

**ವಿಷಯ :16)** ಸಿಬ್ಬಂದಿ ವೃಂದಬಲ, ವೇತನ ಶ್ರೇಣಿ ಮತ್ತು ಇತರೆ ಆರ್ಥಿಕ ಸೌಲಭ್ಯಗಳ ಅನುಮೋದನೆ

**ವಿಷಯ :17)** ಸೇವಾನಿಯಮಗಳು ಹಾಗೂ ವ್ಯವಹಾರ ನಿಯಮಗಳ ಅನುಮೋದನೆ.

**ವಿಷಯ :18)** ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

ಆಡಳಿತ ಮಂಡಳಿ ಸೂಚನೆಯ ಮೇರೆಗೆ

ಸ್ಥಳ : ಗಂಗಾವತಿ.

**ನಾಗೇಶ್ ಗೌಳಿ** ಎಂ. ಕಾಂ.

ದಿನಾಂಕ : 22-08-2024

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಸೂಚನೆ : 1. ಮಹಾಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ಮಹಾಸಭೆಯ 7 ದಿನ ಮುಂಚಿತವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ನೀಡಬೇಕು.

2. ಸದಸ್ಯರು ಮಹಾಸಭೆಗೆ ಬರುವಾಗ ಈ ವಾರ್ಷಿಕ ವರದಿಯನ್ನು ತಪ್ಪದೇ ತರಬೇಕಾಗಿ ವಿನಂತಿ.

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ವಂದನೆಗಳು. ಬ್ಯಾಂಕಿನ 31 ನೇ ಸರ್ವಸದಸ್ಯರ ಸಭೆಗೆ ಆಗಮಿಸಿದ ತಮ್ಮೆಲ್ಲರನ್ನು ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬ್ಯಾಂಕಿನ 2023-24 ನೇ ಸಾಲಿನ ಬ್ಯಾಂಕಿನ ಆರ್ಥಿಕ ವ್ಯವಹಾರಗಳ ಸಮೀಕ್ಷೆಯನ್ನೊಳಗೊಂಡ ವಾರ್ಷಿಕ ವರದಿಯನ್ನು ಪ್ರತಿಬಿಂಬಿಸುವ ಅಢಾವೆ ಪತ್ರಿಕೆ ಮತ್ತು ಲಾಭ-ಹಾನಿ ಪತ್ರಿಕೆಗಳನ್ನು ತಮ್ಮ ಪರಿಶೀಲನೆಗೆ ಹಾಗೂ ಅನುಮೋದನೆಗೆ ಮಂಡಿಸಲು ತುಂಬಾ ಸಂತೋಷವೆನಿಸುತ್ತದೆ.



ಕಳೆದ ಕೆಲ ವರ್ಷಗಳಿಂದ ವಾಣಿಜ್ಯ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳ ಮತ್ತು ಸಹಕಾರ ಪತ್ತಿನ ಸಂಘಗಳಿಂದ ತೀವ್ರ ಪೈಪೋಟಿ ಇದ್ದಾಗ್ಯೂ, ಬ್ಯಾಂಕು ಕಳೆದ ಸಾಲಿಗೆ ಹೋಲಿಸಲಾಗಿ ಪ್ರಸಕ್ತ ಸಾಲಿನಲ್ಲಿ ಉತ್ತಮ ವಹಿವಾಟು, ಠೇವಣಿ ಸಂಗ್ರಹಣೆ, ಸಾಲ ವಿತರಣೆ, ವಸೂಲಾತಿ, ಹಾಗೂ ಆದಾಯ ಗಳಿಕೆಯಲ್ಲಿ ಅತ್ಯುತ್ತಮ ಪ್ರಗತಿಯನ್ನು ದಾಖಲಿಸಿದೆ.

ಬ್ಯಾಂಕು ಸಾಲ ವಿತರಣೆಯು ಕಳೆದ 28 ವರ್ಷಗಳಲ್ಲಿಯೇ ದಾಖಲೆಯ ರೂ.50 ಕೋಟಿಯವರೆಗೆ ತಲುಪಿದೆ ಮತ್ತು ಹಾಕಿಕೊಂಡ ಗುರಿಯನ್ನು ಮೀರಿ ಶೇ.34.8% ರ ಉತ್ತಮ ಪ್ರಗತಿಯನ್ನು ದಾಖಲಿಸಿದೆ. ಈ ಉತ್ತಮ ಪ್ರಗತಿಯನ್ನು ದಾಖಲಿಸಲು ಬ್ಯಾಂಕಿನ ಸದಸ್ಯ ಬಂಧುಗಳ, ಗ್ರಾಹಕರ ಹಾಗೂ ಮುಖ್ಯವಾಗಿ ಠೇವಣಿದಾರರ ಸಹಕಾರ, ಪ್ರೀತಿಯೇ ಮೂಲ ಆಧಾರ ಎಂಬುದು ನಮ್ಮ ದೃಢ ನಂಬಿಕೆ. ಅಲ್ಲದೆ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದ ಶ್ರಮ ಹಾಗೂ ಕಳಕಳಿ, ಆಡಳಿತ ಮಂಡಳಿಯ ಸಕ್ರಿಯ ಹಾಜರಾತಿ, ಉತ್ತಮ ಚರ್ಚೆ ಹಾಗೂ ಆಡಳಿತದಲ್ಲಿ ದಕ್ಷತೆಯನ್ನು ತೋರಿಸಿದ ಫಲವಾಗಿ ಬ್ಯಾಂಕು ವರದಿ ಸಾಲಿನಲ್ಲಿ ಅತ್ಯುತ್ತಮ ಪ್ರಗತಿಯನ್ನು ದಾಖಲಿಸಲು ಸಾಧ್ಯವಾಗಿದೆ. ಇವರೆಲ್ಲರಿಗೂ ನನ್ನ ಹೃದಯಪೂರ್ವಕ ಅಭಿನಂದನೆಗಳು.

ತಮ್ಮ ಠೇವಣಿಗಳನ್ನು ಮತ್ತು ಉಳಿತಾಯದ ಹಣವನ್ನು ಬ್ಯಾಂಕಿನಲ್ಲಿ ತೊಡಗಿಸಿ, ಈ ಮಟ್ಟದ ಪ್ರಗತಿಗೆ, ಯಶಸ್ಸಿಗೆ ಕಾರಣೀಕರ್ತರಾದ ಬ್ಯಾಂಕಿನ ಸದಸ್ಯ ಬಂಧುಗಳು, ಗ್ರಾಹಕರು ಹಾಗೂ ಠೇವಣಿದಾರರಿಗೆ ಅನಂತ ಧನ್ಯವಾದಗಳು.

**ಬ್ಯಾಂಕಿನ ಪ್ರಗತಿಯನ್ನು ಪ್ರತಿಬಿಂಬಿಸುವ ಆರ್ಥಿಕ ಅಂಕಿ-ಅಂಶಗಳ ವಿವರ**

**ಸದಸ್ಯತ್ವ ಹಾಗೂ ಶೇರು ಬಂಡವಾಳ :** ಬ್ಯಾಂಕಿನ ಸದಸ್ಯರ ಸಂಖ್ಯೆಯು ದಿ.31.03.2024 ಕ್ಕೆ 4106 ಇರುತ್ತದೆ. ಬ್ಯಾಂಕಿನ ಶೇರು ಬಂಡವಾಳವು ಪ್ರಸಕ್ತ ಸಾಲಿನ ಅಂತ್ಯಕ್ಕೆ ರೂ. 1,91,42,939.00 ಇರುತ್ತದೆ.

**ಕಾಯ್ದಿಟ್ಟ ನಿಧಿ ಹಾಗು ಇತರೆ ನಿಧಿಗಳು :** ವರದಿ ಸಾಲಿನ ಅಂತ್ಯಕ್ಕೆ ಬ್ಯಾಂಕಿನ ಕಾಯ್ದಿಟ್ಟ ನಿಧಿಯು ಹಾಗೂ ಇತರೆ ನಿಧಿಗಳು ಕ್ರಮವಾಗಿ ರೂ.11,41,29,485.93 ಹಾಗೂ ರೂ. 5,86,76,716.60 ಇರುತ್ತವೆ.

**ಠೇವಣಿಗಳು :** ವರದಿ ಸಾಲಿನ ಅಂತ್ಯಕ್ಕೆ ಎಲ್ಲ ವಿಧದ ಠೇವಣಿಗಳು 72,58,34,056.16 ಇರುತ್ತದೆ. ಕಳೆದ ಸಾಲಿಗೆ ಹೋಲಿಸಲಾಗಿ ರೂ.469.77 ಲಕ್ಷಗಳಷ್ಟು ಹೆಚ್ಚಳವಾಗಿ ಶೇ.6.92 ರಷ್ಟು ಪ್ರಗತಿಯಾಗಿರುತ್ತದೆ. ಠೇವಣಿದಾರರು ಬ್ಯಾಂಕಿನ ಮೇಲಿಟ್ಟ ವಿಶ್ವಾಸ, ಅಭಿಮಾನ ಹಾಗೂ ನೀಡಿದ ಸಹಕಾರಕ್ಕೆ ಬ್ಯಾಂಕಿನ ಸಿಬ್ಬಂದಿ ಹಾಗೂ ಆಡಳಿತ ವರ್ಗವು ಆಭಾರಿಯಾಗಿರುತ್ತದೆ. ಕಳೆದ 5 ವರ್ಷಗಳಿಂದ ಬ್ಯಾಂಕು ಸದಸ್ಯರ ಮುದ್ದತು ಠೇವಣಿಗಳ ಮೇಲೆ ಎಲ್ಲ ವಾಣಿಜ್ಯ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿಯನ್ನು ನೀಡುತ್ತಿದೆ ಆದ್ದರಿಂದ, ಎಲ್ಲ ಸದಸ್ಯ ಬಾಂಧವರು ತಮ್ಮ ಠೇವಣಿಗಳನ್ನು

ಹಾಗೂ ವ್ಯವಹಾರದ ಚಾಲ್ತಿ ಖಾತೆಗಳನ್ನು ಬ್ಯಾಂಕಿನಲ್ಲಿ ನಿರ್ವಹಿಸಿ, ಇದರ ಪ್ರಯೋಜನವನ್ನು ಪಡೆಯಲು ವಿನಂತಿಸುತ್ತೇನೆ.

**ಠೇವಣಿಗಳ ತುಲನಾತ್ಮಕ ಅಂಕಿಅಂಶಗಳ ವಿವರ ಈ ಕೆಳಗಿನಂತೆ ಇವೆ. (ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ಠೇವಣಿಗಳ ವಿವರ | 31.03.2023ರ ಅಂತ್ಯಕ್ಕೆ | 31.03.2024ರಅಂತ್ಯಕ್ಕೆ | (+)ಹೆಚ್ಚು/(–)ಕಡಿಮೆ |
|---|---|---|---|---|
| 1 | ಚಾಲ್ತಿ ಖಾತೆ ಠೇವಣಿ | 633.68 | 869.73 | + 236.05 |
| 2 | ಉಳಿತಾಯ ಖಾತೆ ಠೇವಣಿ | 1750.24 | 1765.47 | + 15.23 |
| 3 | ಮುದ್ದತು ಠೇವಣಿ | 4236.96 | 4446.25 | + 209.29 |
| 4 | ನಿರಂತರ ಠೇವಣಿ | 167.69 | 176.89 | + 9.20 |
| | ಒಟ್ಟು | 6788.57 | 7258.34 | + 469.77 |

ಸನ್ 2024–25 ನೇ ಸಾಲಿಗೆ ರೂ. 76.00 ಕೋಟಿ ಠೇವಣಿಗಳ ಗುರಿಯನ್ನು ಹಾಕಿಕೊಳ್ಳಲಾಗಿದೆ. ಸದಸ್ಯರು ಇನ್ನೂ ಹೆಚ್ಚಿನ ಠೇವಣಿಯನ್ನು ಇಟ್ಟು, ತಮ್ಮ ಬ್ಯಾಂಕಿನ ಏಳ್ಗೆಯಲ್ಲಿ ಸಹಕರಿಸಬೇಕಾಗಿ ನಮ್ರ ವಿನಂತಿ.

**ದುಡಿಯುವ ಬಂಡವಾಳ :** ದಿನಾಂಕ 31.03.2024 ರ ಅಂತ್ಯಕ್ಕೆ ಬ್ಯಾಂಕಿನ ದುಡಿಯುವ ಬಂಡವಾಳವು ರೂ. 91.78 ಕೋಟಿ ಇರುತ್ತದೆ. ಬರಲಿರುವ ವರ್ಷದಲ್ಲಿ ದುಡಿಯುವ ಬಂಡವಾಳ ರೂ.94.00 ಕೋಟಿಗಳ ಗುರಿಯನ್ನು ಬ್ಯಾಂಕು ಹಾಕಿಕೊಂಡಿದೆ.

**ಸಾಲ ಮತ್ತು ಮುಂಗಡಗಳು :** ವರದಿ ಸಾಲಿನ ಅಂತ್ಯಕ್ಕೆ ಸಾಲ ಮತ್ತು ಮುಂಗಡಗಳ ಬರತಕ್ಕ ಬಾಕಿ ಮೊತ್ತ ರೂ.49,56,88,896.87 ಉಳಿದಿರುತ್ತದೆ. ಎಲ್ಲ ಸದಸ್ಯ ಬಾಂಧವರು ತಾವು ಪಡೆದ ಆರ್ಥಿಕ ನೆರವನ್ನು ಸದುದ್ದೇಶಕ್ಕಾಗಿ ವಿನಿಯೋಗಿಸಿಕೊಳ್ಳಲು ಮತ್ತು ಸಾಲ ಮರುಪಾವತಿಯಲ್ಲಿ ವಿಶೇಷ ಕಾಳಜಿಯನ್ನು ವಹಿಸಬೇಕಾಗಿ ವಿನಂತಿ.

**ಸಾಲ ವಸೂಲಾತಿ ಮತ್ತು ಅನುತ್ಪಾದಕ ಆಸ್ತಿ (ಎನ್.ಪಿ.ಎ) :** ಯಾವುದೇ ಬ್ಯಾಂಕಿನ ಆರ್ಥಿಕ ಸ್ಥಿತಿ, ಆರೋಗ್ಯ ಅಳೆಯುವ ಮಾನದಂಡ ಅನುತ್ಪಾದಕ ಆಸ್ತಿ (ಎನ್.ಪಿ.ಎ). ಈ ನಿಟ್ಟಿನಲ್ಲಿ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮದ ಫಲವಾಗಿ ದಿನಾಂಕ 31.03.2024 ರ ಅಂತ್ಯಕ್ಕೆ ಬ್ಯಾಂಕಿನ ಅನುತ್ಪಾದಕ ಆಸ್ತಿಗಳ ಸಂಖ್ಯೆ ಕೇವಲ 26 ಮತ್ತು ಮೊತ್ತವು ಕೇವಲ ರೂ. 418.77 ಲಕ್ಷ ಇದ್ದು, ಸಮಗ್ರ ಶೇಕಡಾ ಪ್ರಮಾಣವು 8.45 ಇರುತ್ತದೆ ಮತ್ತು ನಿವ್ವಳ ಪ್ರಮಾಣವು ಸಾಲ ಮತ್ತು ಮುಂಗಡದ ಶೇ. 0.30 % ರಷ್ಟು ಇದೆ ಎಂದು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಭಾರತೀಯ ರಿಜರ್ವ ಬ್ಯಾಂಕಿನ ನಿರ್ದೇಶನಗಳನ್ವಯ ಎನ್.ಪಿ.ಎ ಸಾಲದ ಖಾತೆಗಳ ಮೇಲೆ ವಸೂಲಾತಿಗಾಗಿ ಸಹಕಾರಿ ನ್ಯಾಯಾಲಯದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. ಸಾಲ ಸೌಲಭ್ಯವನ್ನು ಪಡೆದ ಸದಸ್ಯ ಭಾಂದವರು ತಮ್ಮ ಸಾಲದ ಕಂತುಗಳನ್ನು ಮರುಪಾವತಿಸಿ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶ ನೀಡದೇ ನಿಗದಿತ ಅವಧಿಯೊಳಗೆ ಸಾಲ ಮರುಪಾವತಿಸಲು ವಿನಂತಿಸುತ್ತೇವೆ. ಕಾರಣ, ಸದಸ್ಯ ಭಾಂದವರು ಸಾಲ ವಸೂಲಾತಿಯಲ್ಲಿ ಸಿಬ್ಬಂದಿಯವರೊಂದಿಗೆ ಸಹಕರಿಸಬೇಕಾಗಿ ಕಳಕಳಿಯ ಮನವಿ.

ಆದ್ಯತಾ ವಲಯ ಹಾಗೂ ದುರ್ಬಲ ವರ್ಗದ ಸಾಲ : ಭಾರತೀಯ ರಿಜರ್ವ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕಿನ ಇಂದಿನ ವರ್ಷದ ಸಾಲ ಮತ್ತು ಮುಂಗಡಗಳ ಕನಿಷ್ಠ ಶೇ.60 % ಆದ್ಯತಾ ವಲಯಕ್ಕೆ ಹಾಗೂ ಕನಿಷ್ಠ ಶೇ.11.5% ದುರ್ಬಲ ವರ್ಗಗಳಿಗೆ ಸಾಲ ವಿತರಿಸುವ ಮಿತಿಯನ್ನು ನೀಡಿದೆ. ಆದರೆ, ಬ್ಯಾಂಕು ಆದ್ಯತಾ ವಲಯಕ್ಕೆ ಶೇ.107.73 % ಹಾಗೂ ದುರ್ಬಲ ವರ್ಗಗಳಿಗೆ ಶೇ.24.19% ಸಾಲವನ್ನು ವಿತರಿಸಿ, ರಿಜರ್ವ ಬ್ಯಾಂಕಿನ ನಿರ್ದೇಶನಗಳ ಪಾಲನೆಯನ್ನು ಮಾಡಿದೆ.

**ಬಂಡವಾಳ ಸಮರ್ಪಕತೆ ಅನುಪಾತ (CRAR):-** ಭಾರತೀಯ ರಿಜರ್ವ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕು ಕನಿಷ್ಠ ಶೇ.9 ರಿಂದ 12ರ ಮಿತಿಯ ಅನುಪಾತ (CRAR)ವನ್ನು ಹೊಂದಿರಬೇಕು. ನಮ್ಮ ಬ್ಯಾಂಕು ದಿ.31.3.2024 ಕ್ಕೆ ಶೇ.20.5% ರ ಅನುಪಾತ (CRAR)ವನ್ನು ದಾಖಲಿಸಿ, ರಿಜರ್ವ ಬ್ಯಾಂಕಿನ ನಿರ್ದೇಶನಗಳ ಪಾಲನೆಯನ್ನು ಮಾಡಿದೆ.

**ಹೂಡಿಕೆಗಳು (Investments) :** ಭಾರತೀಯ ರಿಜರ್ವ ಬ್ಯಾಂಕಿನ ಸುತ್ತೋಲೆ ಮತ್ತು ನಿರ್ದೇಶನಗಳನ್ವಯ ಕೇಂದ್ರ ಹಾಗೂ ರಾಜ್ಯ ಸರಕಾರದ ಭದ್ರತಾ ಪತ್ರಗಳಲ್ಲಿ, ವಿವಿಧ ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ ಲಾಭದಾಯಕವಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಹೂಡಿಕೆಯನ್ನು ಮಾಡಲಾಗಿದೆ ಮತ್ತು ರಿಜರ್ವ ಬ್ಯಾಂಕಿನ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲನೆಯನ್ನು ಮಾಡಿದೆ.

**ಬ್ಯಾಂಕಿನ ಶಾಖೆಯ ಪ್ರಾರಂಭ :** ಭಾರತೀಯ ರಿಜರ್ವ ಬ್ಯಾಂಕಿನ ಬಹು ಮುಖ್ಯ ನಿರ್ದೇಶನಗಳನ್ನು ಪಾಲಿಸಿದ ಕಾರಣ, ಮತ್ತು ಶಾಖಾ ವಿಸ್ತರಣೆಗೆ ಅಗತ್ಯವಿರುವ "ಸಧೃಡ ಸಹಕಾರ Financially Sound & Well Manged Bank (FSWM Bank) ಬ್ಯಾಂಕ್" ನ ಅರ್ಹತೆಗಳ ಅನುಪಾಲನೆಯನ್ನು ಪಾಲಿಸಿದ ಪ್ರಯುಕ್ತ, ರಿಜರ್ವ ಬ್ಯಾಂಕು ಕಾರಟಗಿ ಪಟ್ಟಣದಲ್ಲಿ ಬ್ಯಾಂಕಿನ ಪ್ರಥಮ ಶಾಖೆಯನ್ನು ತೆರೆಯಲು ಅನುಮತಿಯನ್ನು ನೀಡಿದೆ. ಕಳೆದ 29 ವರ್ಷಗಳ ಇತಿಹಾಸದಲ್ಲಿ ಬ್ಯಾಂಕಿನ ಪ್ರಥಮ ಶಾಖೆಯನ್ನು ಪ್ರಾರಂಭಿಸಲು ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಸಕಾರಾತ್ಮಕ ಚಿಂತನೆ, ಪ್ರಯತ್ನಗಳು ಫಲ ಕೊಟ್ಟಿದೆ. ಬ್ಯಾಂಕಿನ ಕಾರಟಗಿ ಶಾಖೆಯನ್ನು ದಿ. 22.3.2024ರಂದು ಪ್ರಾರಂಭವಾಗಿ ಯಶಸ್ವಿಯಾಗಿ ನಡೆಯುತ್ತಿರುವುದನ್ನು ಸಭೆಯ ಮಾಹಿತಿಗಾಗಿ ತಿಳಿಸಲು ಸಂತೋಷವೆನಿಸುತ್ತದೆ.

ಅದರಂತೆ, ವರದಿ ಸಾಲಿನಲ್ಲಿಯೂ ದಿ.31.3.2024ರ ಆರ್ಥಿಕ ಮತ್ತು ಆಡಳಿತಾತ್ಮಕ ಪ್ರಗತಿಯನ್ನು ಆಧರಿಸಿ ಬ್ಯಾಂಕು "ಸಧೃಡ ಸಹಕಾರ (FSWM Bank) ಬ್ಯಾಂಕ್" ನ ಅರ್ಹತೆಗಳ ಅನುಪಾಲನೆಯನ್ನು ಪಾಲಿಸಿದ ಪ್ರಯುಕ್ತ ಈ ವರ್ಷಾಂತ್ಯಕ್ಕೆ ಇನ್ನೊಂದು ಶಾಖೆಯನ್ನು ತೆರೆಯಲು ಬ್ಯಾಂಕು ಅರ್ಹತೆಯನ್ನು ಪಡೆದಿದೆ. ಬ್ಯಾಂಕಿನ ಎರಡನೇ ಶಾಖೆಯನ್ನು ಕಂಪ್ಲಿ ಅಥವಾ ಕೊಪ್ಪಳ ನಗರದಲ್ಲಿ ಪ್ರಾರಂಭಿಸಲು ಆಡಳಿತ ಮಂಡಳಿಯು ತೀರ್ಮಾನಿಸಿದೆ. ಈ ಬಗ್ಗೆ ಒಂದು ಸಂಭಾವ್ಯತೆಯ ಅಧ್ಯಯನ (Viability Report) ಮಾಡಿ ನಿರ್ಧರಿಸಲು ಆಡಳಿತ ಮಂಡಳಿ ಯೋಜಿಸಿದೆ. ಇದು ಬ್ಯಾಂಕಿನ ಸದಸ್ಯ ಬಾಂಧವರೆಲ್ಲರಿಗೂ ಹರ್ಷವನ್ನುಂಟು ಮಾಡುತ್ತದೆಂದು ನಮ್ಮ ನಂಬಿಕೆ. ಆದ್ದರಿಂದ, ಬ್ಯಾಂಕಿನ ಎರಡನೇ ಶಾಖೆಯನ್ನು ತೆರೆಯಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸದಸ್ಯ ಬಾಂಧವರಲ್ಲಿ ವಿನಂತಿಸುತ್ತೇನೆ.

**ಸಿಬ್ಬಂದಿ ನೇಮಕಾತಿ 2023-24 :** ಹಿಂದಿನ ಮಹಾಸಭೆಯು ಆಡಳಿತ ಮಂಡಳಿಗೆ ಅಧಿಕಾರ ನೀಡಿದಂತೆ ನೂತನ ಶಾಖೆಗೆ ಬೇಕಾಗುವ ಮತ್ತು ನಿವೃತ್ತರಾಗುತ್ತಿರುವ ಸಿಬ್ಬಂದಿಗಳ ಸ್ಥಾನಕ್ಕೆ ಹೊಸ ಸಿಬ್ಬಂದಿಗಳ (ಗುತ್ತಿಗೆ ಆಧಾರದ) ನೇಮಕಾತಿ ಪ್ರಕ್ರಿಯೆಯನ್ನು, ಇಬ್ಬರು ಬಾಹ್ಯ ತಜ್ಞರನ್ನೊಳಗೊಂಡ ನೇಮಕಾತಿ ಉಪಸಮಿತಿಯು ಆನ್‌ಲೈನ್ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವನ್ನು ನಡೆಸಲು ಮತ್ತು ಅರ್ಹ ಅಭ್ಯರ್ಥಿಗಳ ನೇಮಕಾತಿ ಮಾಡಲು ಆಡಳಿತ ಮಂಡಳಿ ಮತ್ತು ಉಪಸಮಿತಿಯು ಬಾಹ್ಯ ತಜ್ಞರಾದ ಶ್ರೀ ಎಸ್.ಜಿ.ಕುಲಕರ್ಣಿ (ನಿವೃತ್ತ ಅಪೆಕ್ಸ ಬ್ಯಾಂಕ್ ಡಿ.ಜಿ.ಎಮ್.) ಮತ್ತು ಶ್ರೀ ಓಂಕಾರ್ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಪ್ರತಿನಿಧಿ) ಇವರಿಗೆ ಜವಾಬ್ದಾರಿಯನ್ನು ಕೊಡಲಾಗಿತ್ತು. ಅದರಂತೆ, ಅತ್ಯಂತ ಸರಳವಾಗಿ, ಪಾರದರ್ಶಕವಾಗಿ ಆನ್‌ಲೈನ್ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವನ್ನು ನಡೆಸಿ, ಉತ್ತೀರ್ಣರಾದ ಮೂವರು ಅಭ್ಯರ್ಥಿಗಳನ್ನು ನೇಮಕಾತಿ ಮಾಡಿರುತ್ತಾರೆ. ಇವರನ್ನು ನೂತನ ಕಾರಟಗಿ ಶಾಖೆಗೆ ನಿಯೋಜಿಸಲಾಗಿದೆ.

ಅದರಂತೆ, ಬ್ಯಾಂಕು 2024-25 ನೇ ಸಾಲಿಗಾಗಿ "ಸಧೃಡ ಸಹಕಾರ ( FSWM Bank ) ಬ್ಯಾಂಕ್" ನ ಅರ್ಹತೆಗಳ ಅನುಪಾಲನೆಯನ್ನು ಪಾಲಿಸಿದ ಪ್ರಯುಕ್ತ 2024-25 ನೇ ಸಾಲಿಗಾಗಿ ಇನ್ನು ಕೆಲವು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ನೇಮಕಾತಿ ಮಾಡಲು ಆಡಳಿತ ಮಂಡಳಿಯು ನಿರ್ಧರಿಸಿದೆ. ಇದನ್ನು ಸಭೆಯು ಅನುಮೋದಿಸಬೇಕಾಗಿ ವಿನಂತಿ.

**ಬ್ಯಾಂಕಿನ ಆಡಳಿತ ಕಚೇರಿಯ ಕಟ್ಟಡವನ್ನು ಪ್ರಾರಂಭಿಸುವುದು :**

ಬ್ಯಾಂಕಿನ ಆಡಳಿತ ಮಂಡಳಿಯು ಗಂಗಾವತಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದ "A" ಬ್ಲಾಕ್ ನಲ್ಲಿ 100' X 100' ವಿಸ್ತೀರ್ಣದ ಬಿ.19 ನಿವೇಶನವನ್ನು ಖರೀದಿಸಿತ್ತು. ಸದರಿ ನಿವೇಶನದಲ್ಲಿ ಬ್ಯಾಂಕಿನ ಆಡಳಿತ ಕಚೇರಿಯ ಕಟ್ಟಡವನ್ನು ಪ್ರಾರಂಭಿಸಲು ಆಡಳಿತ ಮಂಡಳಿಯು ನಿರ್ಧರಿಸಿದೆ.

ಈ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಸಭೆಯು ಅನುಮೋದನೆ ನೀಡಲು ಆಡಳಿತ ಮಂಡಳಿಯ ಪರವಾಗಿ ವಿನಂತಿಸುತ್ತೇನೆ.

**ಡಿವಿಡೆಂಡ್ ವಿತರಣೆ :** ಸನ್ 2023-24ನೇ ಸಾಲಿಗೆ 15% ಡಿವಿಡೆಂಡ್ ವಿತರಿಸಲು ಆಡಳಿತ ಮಂಡಳಿಯು ತೀರ್ಮಾನಿಸಿದೆ. ಸದಸ್ಯರು ಆಡಳಿತ ಮಂಡಳಿಯ ತೀರ್ಮಾನವನ್ನು ಸ್ವಾಗತಿಸುವಿರೆಂದು ನನ್ನ ನಂಬಿಕೆ.

**ಲಾಭಗಳಿಕೆ ಹಾಗೂ ವಿತರಣೆ :** ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ. 2,28,83,371.98 ಗಳ ಒಟ್ಟು ಲಾಭವನ್ನುಗಳಿಸಿದೆ. ಇದರಲ್ಲಿ ಭಾರತೀಯ ರಿಝರ್ವ ಬ್ಯಾಂಕ್ ನಿಯಮಗಳ ರೀತ್ಯ ಲಭ್ಯವಿರುವ ಎನ್.ಪಿ.ಎ. ಪ್ರಾವಿಜನ್ ರೂ. 16,40,000.00 ಗಳನ್ನು ಮತ್ತು ಆದಾಯ ತೆರಿಗೆ ರೂ. 48,69,130.00 ಗಳ ಮೊತ್ತವನ್ನು ತೆಗೆದಿರಿಸಿ, ನಿವ್ವಳ ರೂ. 1,63,74,241.98 ಲಾಭವನ್ನು ಗಳಿಸಿದೆ. ಕಳೆದ ಸಾಲಿಗೆ ಹೋಲಿಸಿದಲ್ಲಿ ಬ್ಯಾಂಕು ಲಾಭ ಗಳಿಕೆಯಲ್ಲಿ ಶೇ 33.4ರ ಪ್ರಗತಿಯನ್ನು ದಾಖಲಿಸಿದೆ. ಸದರಿ ನಿವ್ವಳ ಲಾಭವನ್ನು ಸೌಹಾರ್ದ ಕಾಯ್ದೆಯ ರೀತ್ಯ ಈ ಕೆಳಗಿನಂತೆ ವಿತರಿಸಲು ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ.

**ಸನ್ 2023-24ನೇ ಸಾಲಿನ ಲಾಭಾಂಶ ಹಂಚಿಕೆ**

| ಕ್ರ.ಸಂ. | ವಿವರ | ರಕಮು |
|---|---|---|
| 1. | ಕಾಯ್ದಿಟ್ಟ ನಿಧಿ (25%) | 40,93,560.00 |
| 2. | ಸಹಕಾರ ಶಿಕ್ಷಣ ನಿಧಿ - ಸೌಹಾರ್ದ ಸಹಕಾರ ಶಿಕ್ಷಣ ನಿಧಿ (2%) | 3,27,484.00 |
| 3. | ಅನೀರಿಕ್ಷಿತ ನಷ್ಟಗಳು ಅಥವಾ ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣ ಮೀಸಲು ನಿಧಿಗೆ (20%) | 32,74,848.00 |
| 4. | ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮನಿಧಿಗೆ (5%) | 8,18,712.00 |
| 5. | ಸದಸ್ಯರ ಮಕ್ಕಳ ಶಿಕ್ಷಣ ಅಭಿವೃದ್ಧಿಗಾಗಿ ಪ್ರೋತ್ಸಾಹಿಸಲು ಶಿಕ್ಷಣ ನಿಧಿ (5%) | 8,18,712.00 |
| 6. | ಲಾಬಾಂಶ ವಿತರಣೆಗಾಗಿ ಕಾಯ್ದಿರಿಸಿದ್ದು | 24,00,000.00 |
| 7. | ಉಳಿದದ್ದು ಕಾರ್ಯಾಚರಣ ಮೀಸಲು ನಿಧಿಗೆ | 46,40,925.98 |
| | **ಒಟ್ಟು** | **1,63,74,241.98** |

**ಆಯ-ವ್ಯಯ :** 2023-24ನೇ ಸಾಲಿಗೆ ಮಂಜೂರಿಯಾದ ಆಯ-ವ್ಯಯದ ಅಂದಾಜಿಗಿಂತ ಹೆಚ್ಚಿಗೆ ಆದ ಖರ್ಚನ್ನು ಸ್ವೀಕರಿಸಲು ಮತ್ತು ವರದಿಯಲ್ಲಿ ಕೊಟ್ಟಿರುವ ಸನ್ 2024-25ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಮತ್ತು ಸನ್ 2025-2026ನೇ ಸಾಲಿನ ತಾತ್ಕಾಲಿಕ ಮುಂಗಡ ಪತ್ರವನ್ನು ಅನುಮೋದಿಸಲು ಸಭೆಯ ಮಂಜೂರಾತಿಗೆ ಇಟ್ಟಿರುತ್ತದೆ.

**ಠೇವಣಿ ಮೇಲೆ ವಿಶೇಷ ಬಡ್ಡಿ :** 60 ವರ್ಷ ಮೇಲ್ಪಟ್ಟ ನಗರದ ಹಿರಿಯ ನಾಗರೀಕರಿಗೆ ಅನುವಾಗಲೆಂದು ಅವರ ಠೇವಣಿಗಳ ಮೇಲೆ ಪ್ರತಿಶತ 0.5 ರಂತೆ ವಿಶೇಷ ಬಡ್ಡಿಯನ್ನು ಕೊಡಲಾಗುತ್ತಿದೆ. ಹಿರಿಯ ಸದಸ್ಯರು ಇದರ ಪ್ರಯೋಜನವನ್ನು ಪಡೆದುಕೊಳ್ಳಲು ವಿನಂತಿ. ಇದಕ್ಕಾಗಿ ತಮ್ಮ ವಯಸ್ಸಿನ ಬಗ್ಗೆ ಧೃಡೀಕರಣ ಪತ್ರವನ್ನು ತರಬೇಕಾಗುತ್ತದೆ.

**ಟಿ.ಡಿ.ಎಸ್. (ಮೂಲದಲ್ಲಿ ಆದಾಯ ತೆರಿಗೆ ಕಡಿತ) :** ಸದಸ್ಯರ ಠೇವಣಿ ಮೇಲಿನ ಬಡ್ಡಿ ಆದಾಯವು ರೂ.40,000.00

(ಹಿರಿಯ ನಾಗರಿಕರಿಗೆ ರೂ.50000.00) ಮೀರಿದಲ್ಲಿ ಟಿ.ಡಿ.ಎಸ್. (ಮೂಲದಲ್ಲಿ ಆದಾಯ ತೆರಿಗೆ ಕಡಿತ) ಅನ್ವಯವಾಗುತ್ತದೆ. ಟಿ.ಡಿ.ಎಸ್. ವಿನಾಯಿತಿ ಬಯಸುವವರು ತಮ್ಮ ಪಾನ್ ಕಾರ್ಡ ಪ್ರತಿಯೊಂದಿಗೆ ನಮೂನೆ 15–ಜಿ ಅಥವಾ 15–ಹೆಚ್ (ಹಿರಿಯ ನಾಗರಿಕರಿಗೆ) ಸಲ್ಲಿಸಬೇಕಾಗುತ್ತದೆ.

ಲೆಕ್ಕಪರಿಶೋಧನೆ ಮತ್ತು ವರ್ಗೀಕರಣ : ಸನ್ 2023–24 ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆ ಮಾಡಲು ಮೆ. ಎಸ್.ಎಂ ಇಂಚಲ್‌ಮಠ್ ಅಂಡ್ ಕೋ., ಚಾರ್ಟರ್ಡ ಅಕೌಂಟಂಟ್, ಹುಬ್ಬಳ್ಳಿ ಇವರನ್ನು 3 ನೇ ಅವಧಿಗೆ ಭಾರತೀಯ ರಿಜರ್ವ ಬ್ಯಾಂಕ್ ನೇಮಕ ಮಾಡಿದ್ದು, ಲೆಕ್ಕಪರಿಶೋಧನೆಯಲ್ಲಿ ಬ್ಯಾಂಕಿಗೆ "ಅ" ಶ್ರೇಣಿಯನ್ನು ನೀಡಿರುತ್ತಾರೆ ಮತ್ತು ಸೂಕ್ತ ಸಲಹೆಗಳನ್ನು ನೀಡಿರುತ್ತಾರೆ.

ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನೆಯನ್ನು ಶ್ರೀ ಶಂಕರ್ ಜಾಧವ್ CA, ಚಾರ್ಟರ್ಡ ಅಕೌಂಟಂಟ್ ಇವರು ಮಾಡಿದ್ದು, ಕೆಲವು ಸೂಕ್ತ ಸಲಹೆಗಳನ್ನು ನೀಡಿರುತ್ತಾರೆ.

ಸ್ಮರಣೆ ಹಾಗೂ ಕೃತಜ್ಞತೆಗಳು : ಬ್ಯಾಂಕಿನ ಸರ್ವಾಂಗೀಣ ಪ್ರಗತಿಯ ದಿವ್ಯಚೇತನ ಹಾಗೂ ಶ್ರೀರಕ್ಷೆಯಾಗಿರುವ ನಗರದ ಆರಾಧ್ಯದೈವ ಮ.ನಿ.ಪ್ರ ಶ್ರೀ ಚನ್ನಬಸವ ಮಹಾಸ್ವಾಮಿಗಳ ಪಾದಾರವಿಂದಗಳಿಗೆ ನಮಿಸುತ್ತಾ ಬ್ಯಾಂಕಿನ ಮೇಲೆ ವಿಶ್ವಾಸವಿಟ್ಟು ತಮ್ಮ ಠೇವಣಿಗಳನ್ನು ತೊಡಗಿಸಿದ ಎಲ್ಲಾ ಠೇವಣಿದಾರರಿಗೆ, ಸದಸ್ಯ ಹಾಗೂ ಗ್ರಾಹಕ ಬಂಧುಗಳಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು. ಬ್ಯಾಂಕಿನ ಉತ್ಸಾಹೀ ಹಾಗೂ ಸಮರ್ಥ ಆಡಳಿತ ಮಂಡಳಿ ಹಾಗೂ ಅರ್ಪಣಾ ಮನೋಭಾವದಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಸಂಘಟಿತ ಶ್ರಮದ ಫಲವಾಗಿ ಈ ವರ್ಷ ಬ್ಯಾಂಕು ಅತ್ಯುತ್ತಮ ಪ್ರಗತಿಯನ್ನು ದಾಖಲಿಸಿದೆ. ಕಾರಣ, ಅವರಿಗೆ ನನ್ನ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಬ್ಯಾಂಕಿನ ಪ್ರಗತಿಗೆ ತಮ್ಮ ಅಮೂಲ್ಯ ಸಲಹೆ, ಸಹಕಾರವನ್ನು ನೀಡಿದ ಭಾರತೀಯ ರಿಝರ್ವ ಬ್ಯಾಂಕಿನ ಅಧಿಕಾರಿಗಳಿಗೆ, ಮಹಾಮಂಡಳ, ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಮತ್ತು ಸೌಹಾರ್ದ ಒಕ್ಕೂಟ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳಿಗೆ ನನ್ನ ವಂದನೆಗಳು.

ಬ್ಯಾಂಕಿನ ಪ್ರಗತಿಯಲ್ಲಿ ಸಹಕರಿಸಿದ ಸ್ಥಳೀಯ ಶ್ರೀ ಚನ್ನಮಲ್ಲಿಕಾರ್ಜುನ ಟ್ರಸ್ಟ್ ಕಮಿಟಿಯವರಿಗೂ, ರಾಯಚೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಬ್ಯಾಂಕಿನ ಕಾನೂನು ಸಲಹೆಗಾರರು ಹಾಗೂ ಸಕಾಲದಲ್ಲಿ ವರದಿಯನ್ನು ನೀಡಿದ ಲೆಕ್ಕಪರಿಶೋಧಕರಿಗೂ ಸಿಬ್ಬಂದಿ ನೇಮಕಾತಿ ಮತ್ತು ಶಾಖೆಯ ಪ್ರಾರಂಭಕ್ಕೆ ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡಿದ ಶ್ರೀ ಎಸ್.ಜಿ. ಕುಲಕರ್ಣಿ (ಅಪೆಕ್ಸ್ ಬ್ಯಾಂಕ್ ನಿವೃತ್ತ DGM)ಹಾಗೂ ಶ್ರೀ ಓಂಕಾರ್ (ಸಂಯುಕ್ತ ಸಹಕಾರಿ ಪ್ರತಿನಿಧಿ ಇವರಿಗೆ ನನ್ನ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

ಬ್ಯಾಂಕಿನ ಉನ್ನತಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತಮ್ಮ ಬೆಂಬಲ, ಸಹಕಾರವನ್ನು ನೀಡಿದ ಎಲ್ಲ ಮಹನೀಯರಿಗೂ, ಮಹಿಳೆಯರಿಗೂ, ಸಂಘ ಸಂಸ್ಥೆಗಳಿಗೂ, ಪತ್ರಿಕಾ ಮಿತ್ರರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮತ್ತೊಮ್ಮೆ ಎಲ್ಲರಿಗೂ ವಂದಿಸಿ ಶ್ರೀ ಚನ್ನಬಸವ ತಾತನವರ ಕೃಪಾಶೀರ್ವಾದದಿಂದ ಬ್ಯಾಂಕು ಬರಲಿರುವ ದಿನಗಳಲ್ಲಿ ಇನ್ನೂ ಉತ್ತಮ ಸ್ಥಿತಿಗೆ ತಲುಪಲೆಂದು ಹಾಗೂ ತಾತನವರ ಅನುಗ್ರಹ, ಶ್ರೀರಕ್ಷೆ ನಮ್ಮೆಲ್ಲರ ಮೇಲೆ ಸದಾ ಇರಲೆಂದು ಆಶಿಸುತ್ತಾ ಈ ವರದಿಯನ್ನು ಮುಕ್ತಾಯಗೊಳಿಸುತ್ತೇನೆ.

ಜೈ ಕರ್ನಾಟಕ, **ಸಹಕಾರಕ್ಕೆ ಜಯವಾಗಲಿ.** ಕಾರ್ಯಕಾರಿ ಮಂಡಳಿಯ ಪರವಾಗಿ

ಗಂಗಾವತಿ . (ಗಿರಿಯಪ್ಪ ಹೊಸಕೇರಿ)

ಅಧ್ಯಕ್ಷರು

## ಸನ್ 2023-24 ನೇ ಸಾಲಿನ 31 ನೇ ವಾರ್ಷಿಕ ಮಹಾಸಭೆಯ ವಿಷಯ ಮತ್ತು ಟಿಪ್ಪಣಿಗಳು

ವಿಷಯ : 1) 31ನೇ ಸರ್ವ ಸದಸ್ಯರ ಮಹಾಸಭೆ ನೋಟೀಸು ಓದಿ ದಾಖಲು ಮಾಡುವುದು

ಟಿಪ್ಪಣಿ : ಪುಟ ಸಂಖ್ಯೆ 1 ರಲ್ಲಿ ಪ್ರಕಟಿಸಿದ 31ನೇ ಸರ್ವ ಸದಸ್ಯರ ಮಹಾಸಭೆ ನೋಟೀಸು ಓದಿ ದಾಖಲು ಮಾಡುವುದು

ವಿಷಯ : 2) ಹಿಂದಿನ ಮಹಾಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವುದು.

ಟಿಪ್ಪಣಿ : ದಿ. 23.9.2023 ರಂದು ಜರುಗಿದ ಬ್ಯಾಂಕಿನ 30ನೇ ಸಾಮಾನ್ಯ ಸಭೆಯ ವಿಷಯ 1 ರಿಂದ 18 ರವರೆಗೆ ವಿಷಯಾವಾರು ನಿರ್ಣಯಗಳನ್ನು ಓದಿ ಧೃಡೀಕರಿಸುವುದು.

ವಿಷಯ : 3) ಮಂಡಳಿಯು ಸಲ್ಲಿಸಿದ ವಾರ್ಷಿಕ ವರದಿಯ ಪರಿಗಣನೆ.

ಟಿಪ್ಪಣಿ : ಸನ್ 2023-24 ನೇ ಸಾಲಿಗಾಗಿ ಆಡಳಿತ ಮಂಡಳಿ ಸಲ್ಲಿಸಿದ ಬ್ಯಾಂಕಿನ ವಾರ್ಷಿಕ ವರದಿಯನ್ನು ಈ ವರದಿಯ ಪುಟ 2 ರಿಂದ 6 ವರೆಗೆ ನೀಡಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ : 4) ಲೆಕ್ಕಪರಿಶೋಧನಾ ವರದಿಯ ಮತ್ತು ಪರಿಶೋಧಿತ ಲೆಕ್ಕಗಳ ಪರಿಗಣನೆ.

ಟಿಪ್ಪಣಿ : ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರಾದ ಶ್ರೀ ಎಸ್.ಎಂ ಇಂಚಲ್‌ಮಠ್ ಅಂಡ್ ಕೋ., ಹುಬ್ಬಳ್ಳಿ ಇವರು ನೀಡಿದ ಸನ್ 2023-24 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಆರ್ಥಿಕ ತ:ಖ್ತೆಗಳನ್ನು ಈ ಮಹಾಸಭೆಯ ವರದಿ ಪುಟ 9 ರಿಂದ 15ರಲ್ಲಿ ಮಂಡಿಸಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ : 5) ಲೆಕ್ಕಪರಿಶೋಧನಾ ವರದಿಯ ಪಾಲನಾ ವರದಿಯ ಪರಿಗಣನೆ.

ಟಿಪ್ಪಣಿ : ಶಾಸನಬದ್ಧ ಲೆಕ್ಕಪರಿಶೋಧಕರಾದ ಶ್ರೀ ಎಸ್.ಎಂ ಇಂಚಲ್‌ಮಠ್ ಅಂಡ್ ಕೋ., ಹುಬ್ಬಳ್ಳಿ ಇವರು ನೀಡಿದ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಈ ಸಭೆಯಲ್ಲಿ ಮಂಡಿಸಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ

ವಿಷಯ : 6) ಲೆಕ್ಕಪರಿಶೋಧಕರ ಮತ್ತು ಆಂತರಿಕ ಲೆಕ್ಕ ಪರಿಶೋಧಕರ ನೇಮಕ.

ಟಿಪ್ಪಣಿ : 2024-25 ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಶ್ರೀ ಪಿ.ಕೆ.ಸುಬ್ರಮಣ್ಯಂ ಅಂಡ್ ಕೋ., ಚಾರ್ಟರ್ಡ್ ಅಕೌಂಟಂಟ್ಸ್ ರಾಯಚೂರು ಮತ್ತು ಎಸ್.ಆರ್.ಅಂಡ್ ಎಂ.ಆರ್. ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟಂಟ್ಸ್ , ಬೆಂಗಳೂರು ಇವರ ಹೆಸರುಗಳನ್ನು ಆಡಳಿತ ಮಂಡಳಿಯು ಅಂತಿಮಗೊಳಿಸಿ ಭಾರತೀಯ ರಿಜರ್ವ ಬ್ಯಾಂಕಿಗೆ ಪೂರ್ವಾನುಮತಿಗಾಗಿ ಸಲ್ಲಿಸಿ ಮಹಾಸಭೆಯ ಅನುಮೋದನೆಗಾಗಿ ಮಂಡಿಸಿದೆ. ಭಾರತೀಯ ರಿಜರ್ವ ಬ್ಯಾಂಕು ಅನುಮೋದಿಸುವ ಆಡಿಟ್ ಸಂಸ್ಥೆಯು 2024-25 ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಮಾಡಲು ಅರ್ಹರಿರುತ್ತಾರೆ. ಹಾಗೂ ಆಂತರಿಕ ಲೆಕ್ಕ ಪರಿಶೋಧಕರಾಗಿ ಶ್ರೀ ಎಂ.ದುರ್ಗಾ & ಕೋ ಸಿ.ಏ ವೀರಭದ್ರಪ್ಪ ಗದ್ವಾಲ್ ಗಂಗಾವತಿ, ಇವರನ್ನು (ರೂ.12,000.00 ಮಾಸಿಕ+ಸೇವಾ ತೆರಿಗೆ) ನೇಮಕ ಮಾಡಿರುವುದನ್ನು ಸಭೆಯು ಅನುಮೋದಿಸಬಹುದಾಗಿದೆ.

ವಿಷಯ : 7) ನಿವ್ವಳ ಲಾಭ ವಿಲೆ ಮಾಡುವದು ಮತ್ತು ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದ ಇತರ ನಿಧಿಗಳ ಸೃಜನೆ

ಟಿಪ್ಪಣಿ : ಬ್ಯಾಂಕಿನ ಸನ್ 2023-24 ನೇ ಸಾಲಿನ ನಿವ್ವಳ ಲಾಭ ರೂ. 1,63,74,241.98 ಯನ್ನು ವರದಿಯ ಪುಟ 5ರಲ್ಲಿ ಮಂಡಿಸಿ ಸಭೆಯ ಮಂಜೂರಾತಿಗಾಗಿ ಇಟ್ಟಿದೆ.

ವಿಷಯ : 8) ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರಾವಲೋಕನ.

ಟಿಪ್ಪಣಿ : ಕಾರ್ಯಾಚರಣೆಯ ಕೊರತೆ ಯಾವುದೂ ಇರುವುದಿಲ್ಲ.

ವಿಷಯ : 9) ದೀರ್ಘಾವಧಿ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಗಳ ಅನುಮೋದನೆ.

ಟಿಪ್ಪಣಿ : ಬ್ಯಾಂಕಿನ ಸನ್ 2024-25 ನೇ ಸಾಲಿನ ವಾರ್ಷಿಕ ಕಾರ್ಯಾಚರಣೆಯ ಗುರಿಯನ್ನು ವರದಿಯ 19ನೇ ಪುಟದಲ್ಲಿ ವಿವರಿಸಿದೆ. ಸಭೆಯು ಪರಿಶೀಲಿಸಿ ಅನುಮೋದಿಸಬಹುದಾಗಿದೆ

ವಿಷಯ : 10) 2024-25ನೇ ಸಾಲಿನ ಪರಿಷ್ಕೃತ ಮತ್ತು 2025-26ನೇ ಸಾಲಿನ ಅಂದಾಜು ವಾರ್ಷಿಕ ಬಜೆಟ್‌ಗಳ ಅನುಮೋದನೆ.

ಟಿಪ್ಪಣಿ : 30ನೇ ಸರ್ವ ಸದಸ್ಯರ ಮಹಾಸಭೆ ನೋಟೀಸಿನಲ್ಲಿ ನೀಡಲಾದ ಸನ್ 2024-25ರ (ಪರಿಷ್ಕೃತ) ಮತ್ತು

2025–26ರ ಅಂದಾಜು ವಾರ್ಷಿಕ ಬಜೆಟ್‌ನ್ನು ಪುಟ ಸಂಖ್ಯೆ 19 ರಲ್ಲಿ ವಿವರಿಸಿದಂತೆ ಪರಿಶೀಲಿಸಿ, ಅಂದಾಜಿಗಿಂತ ಹೆಚ್ಚಿಗೆ ಆದ ಖರ್ಚುಗಳನ್ನು ಸಭೆಯು ಅನುಮೋದಿಸಬಹುದಾಗಿದೆ.

ವಿಷಯ : 11) ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನಾರಾವಲೋಕನ.

ಠರಾವು : ಯಾವುದೂ ಇರುವುದಿಲ್ಲ.

ವಿಷಯ : 12) ಇತರೆ ಸಹಕಾರಿಗಳಲ್ಲಿ ಹೊಂದಿರುವ ಸದಸ್ಯತ್ವದ ವರದಿ.

ಟಿಪ್ಪಣಿ : ನಮ್ಮ ಬ್ಯಾಂಕು ಈ ಕೆಳಕಂಡ ಸಹಕಾರಿ ಸಂಸ್ಥೆಗಳಲ್ಲಿ ತನ್ನ ಸದಸ್ಯತ್ವವನ್ನು ಹೊಂದಿದೆ. 1) ರಾಯಚೂರು ಜಿಲ್ಲಾ ಮಧ್ಯವರ್ತಿ ಸಹಕಾರ ಬ್ಯಾಂಕ್ ನಿ., ರಾಯಚೂರು 2) ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ನಿ., ಕೊಪ್ಪಳ 3) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು 4) ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು 5) ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ನವದೆಹಲಿ 6) ಕರ್ನಾಟಕ ಸೌಹಾರ್ದ ಒಕ್ಕೂಟ ಸಹಕಾರಿ ನಿ., ಬೆಂಗಳೂರು. 7) ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಕೊಪ್ಪಳ 8. ಶ್ರೀ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು

ವಿಷಯ : 13) ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಬಗ್ಗೆ ಸಂಕ್ಷಿಪ್ತ ವರದಿ.

ಠರಾವು : ವರ್ಷದ ಆರಂಭದಲ್ಲಿ ಇದ್ದ ಸದಸ್ಯರ ಸಂಖ್ಯೆ 3892 ಅದರಲ್ಲಿ ಈ ವರ್ಷ ಸದಸ್ಯತ್ವವನ್ನು ಹಿಂಪಡೆದವರ ಸಂಖ್ಯೆ 44 ಮತ್ತು ಈ ವರ್ಷ ಹೊಸದಾಗಿ 258 ಜನ ಸದಸ್ಯತ್ವವನ್ನು ಪಡೆದಿದ್ದು, ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 4106

ವಿಷಯ : 14) ಹಿಂದಿನ ವರ್ಷ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ಪಡೆಯುವುದು.

1ಟಿಪ್ಪಣಿ : ಹಿಂದಿನ ಸಾಲಿನ ಆಯವ್ಯಯದ ಕ್ರ.ಸಂ. 2 ಮತ್ತು 5 ಇನ್ನಿತರ ವೆಚ್ಚದಲ್ಲಿ ರೂ.30.00 ಲಕ್ಷ ಅಂದಾಜು ಮಾಡಲಾಗಿದ್ದು, ವಾಸ್ತವವಾಗಿ ರೂ.42.06 ಲಕ್ಷ ಆಗಿದ್ದು, ತಾಂತ್ರಿಕ ವೆಚ್ಚಗಳು ಮತ್ತು ಠೇವಣಿ ವಿಮೆ, ಸವಕಳಿ, ವಿದ್ಯುಚ್ಛಕ್ತಿ ವೆಚ್ಚದಲ್ಲಿ ಹೆಚ್ಚಳವಾಗಿರುತ್ತದೆ. ಉಳಿದ ಎಲ್ಲಾ ವೆಚ್ಚಗಳು ಅಂದಾಜಿನ ಮಿತಿಯಲ್ಲಿಯೇ ಇರುವುದರಿಂದ ಸಭೆಯು ತನ್ನ ಅನುಮೋದನೆಯನ್ನು ನೀಡಬೇಕಾಗಿ ವಿನಂತಿ.

ವಿಷಯ : 15) ಸೇವಾ ನಿವೃತ್ತಿ ಹೊಂದಿದ ಶ್ರೀ ಅಲ್ಲಮಪ್ರಭು ಪಾಟೀಲ & ಶ್ರೀಮತಿ ನಳಿಸಿ ಹಿರೇಮಠ ಇವರಿಗೆ ಸನ್ಮಾನಿಸಿ ಗೌರವಿಸುವುದು.

ಟಿಪ್ಪಣಿ : ಹಾಗೆಯೇ, ಬ್ಯಾಂಕಿನ ಹಿರಿಯ ಸಹಾಯಕರಾದ ಶ್ರೀ ಅಲ್ಲಮಪ್ರಭು ಇವರು 28 ವರ್ಷಗಳ ಸೇವೆಯನ್ನು ಸಲ್ಲಿಸಿ ದಿ. 31.5.2024 ರಂದು ನಿವೃತ್ತರಾಗಿರುತ್ತಾರೆ. ಹಾಗೆಯೇ ಶ್ರೀಮತಿ ನಳಿನಿ ಹಿರೇಮಠ ಇವರು 28 ವರ್ಷಗಳ ಸೇವೆಯನ್ನು ಸಲ್ಲಿಸಿ ದಿ. 31.8.2024 ರಂದು ನಿವೃತ್ತರಾಗುತ್ತಿದ್ದಾರೆ. ಇವರಿಗೆ ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ಮತ್ತು ಸದಸ್ಯರ ಪರವಾಗಿ ಸನ್ಮಾನಿಸಿ, ಗೌರವಿಸುವುದು.

ವಿಷಯ : 16) ಸಿಬ್ಬಂದಿ ವೃಂದಬಲ, ವೇತನ ಶ್ರೇಣಿ ಮತ್ತು ಇತರೆ ಆರ್ಥಿಕ ಸೌಲಭ್ಯಗಳ ಅನುಮೋದನೆ

ಟಿಪ್ಪಣಿ : ಸಿಬ್ಬಂದಿ ವೃಂದಬಲ, ವೇತನ ಶ್ರೇಣಿ ಮತ್ತು ಇತರೆ ಆರ್ಥಿಕ ಸೌಲಭ್ಯಗಳ ವಿವರಗಳನ್ನು ಮಂಡಿಸಿದೆ. ಸಭೆಯು ಅನುಮೋದಿಸ ಬಹುದಾಗಿದೆ.

ವಿಷಯ : 17) ಸೇವಾ ನಿಯಮಗಳು ಹಾಗೂ ವ್ಯವಹಾರ ನಿಯಮಗಳ ಅನುಮೋದನೆ.

ಟಿಪ್ಪಣಿ : ಸೇವಾ ನಿಯಮಗಳು ಹಾಗೂ ವ್ಯವಹಾರ ನಿಯಮಗಳ ವಿವರವನ್ನು ಮಂಡಿಸಿದೆ ಸಭೆಯಲ್ಲಿ ಅನುಮೋದಿಸ ಸಭೆಯು ಬಹುದಾಗಿದೆ.

ವಿಷಯ : 18) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

ಟಿಪ್ಪಣಿ : ಸದಸ್ಯರ ಲಿಖಿತ ಪ್ರಶ್ನೆಗಳಿಗೆ ಉತ್ತರಿಸುವುದು

# ದಿನಾಂಕ 31-03-2024 ಕ್ಕೆ ಅಂತ್ಯಗೊಂಡ ವರ್ಷದ ಆಢಾವೆ ಪತ್ರಿಕೆ

| ಶೇರು ಬಂಡವಾಳ ಹಾಗೂ ಜವಾಬ್ದಾರಿಗಳು | ಷೆಡ್ಯೂಲ ಸಂಖ್ಯೆ | ದಿ. 31-3-2024ಕ್ಕೆ ರಕಮು | ಆಸ್ತಿಗಳು | ಷೆಡ್ಯೂಲ ಸಂಖ್ಯೆ | ದಿ. 31-3-2024ಕ್ಕೆ ರಕಮು |
|---|---|---|---|---|---|
| ಅಧಿಕೃತ ಬಂಡವಾಳ | | 50,00,00,000–00 | ನಗದು ಶಿಲ್ಕು | | 81,34,977–00 |
| ಶೇರು ಬಂಡವಾಳ | 1 | 1,91,42,939–00 | ಬ್ಯಾಂಕುಗಳಲ್ಲಿರುವ ಶಿಲ್ಕು | 6 | 10,97,32,467–24 |
| ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | 2 | 17,28,06,202–53 | ಗುಂತಾವಣೆಗಳು | 7 | 31,74,69,833–44 |
| ಠೇವಣಿಗಳು | 3 | 72,58,34,056–16 | ಸಾಲ ಮತ್ತು ಮುಂಗಡಗಳು | 8 | 49,56,88,896–87 |
| ಪಡೆದ ಸಾಲಗಳು | 4 | – | ಚರಾಸ್ಥಿಗಳು | 9 | 31,76,928–60 |
| ಇತರೆ ಜವಾಬ್ದಾರಿಗಳು | 5 | 24,70,40,768–63 | ಇತರೆ ಬರತಕ್ಕದ್ದು | 10 | 24,74,66,673–15 |
| ಆದಾಯ ತೆರಿಗೆ ಪಾವತಿಸಬೇಕಾದ್ದು | | 49,71,568–00 | ಆದಾಗ ತೆರಿಗೆ ಮುಂಗಡ | | 45,00,000–00 |
| ನಿವ್ವಳ ಲಾಭ | | 1,63,74,241–98 | | | |
| ಒಟ್ಟು | | 1,18,61,69,776–30 | ಒಟ್ಟು | | 1,18,61,69,776–30 |

| ವಿವರ | ಷೆಡ್ಯೂಲ | 31ನೇ ಮಾರ್ಚ,2024ಕ್ಕೆ |
|---|---|---|
| ಸ್ವೀಕೃತಿ ಮತ್ತು ಇತರೆ ಭಾದ್ಯತೆಗಳು | | 0–00 |
| ಶಾಖಾ ಹೊಂದಾಣಿಕೆಗಳು | | 21,55,63,844.82 |
| ಸಾಲಗಳ ಮೇಲೆ ಬರಬಹುದಾದ ಬಡ್ಡಿ (ಸುಸ್ತಿ) | | 1,23,90,034.00 |
| ಒಟ್ಟು | | **22,79,53,878.82** |

ಸ್ಥಳ: ಗಂಗಾವತಿ
ದಿನಾಂಕ : 22.06.2024

ಸಹಿ/
ಶ್ರೀ ಎಸ್.ಎಂ. ಇಂಚಲಮಠ & ಕೋ
ಚಾರ್ಟರ್ಡ್ ಅಕೌಂಟೆಂಟ್ಸ್
ಶಾಸನಬದ್ಧ ಲೆಕ್ಕಪರಿಶೋಧಕರು
(ನಿರಂಜನ ಹಿರೇಮಠ ಸಿ.ಎ.) ಪಾಲುದಾರರು
M.No. 024786
FRN No. 103746W

ಸಹಿ/
ನಾಗೇಶ ಜಿ.
ಪ್ರಧಾನ ವ್ಯವಸ್ಥಾಪಕರು

ಸಹಿ/
ಗಿರಿಯಪ್ಪ ಹೊಸಕೇರಿ
ಅಧ್ಯಕ್ಷರು

ಸಹಿ/
ಕೆ. ಕಾಳಪ್ಪ
ನಿರ್ದೇಶಕರು

ಸಹಿ/
ಕೆ. ಚನ್ನಬಸಯ್ಯಸ್ವಾಮಿ
ನಿರ್ದೇಶಕರು

## ದಿನಾಂಕ 31-03-2024ಕ್ಕೆ ಅಂತ್ಯಗೊಂಡ ವರ್ಷದ ಲಾಭ-ಹಾನಿ ಪತ್ರಿಕೆ

| ಖರ್ಚುಗಳ ವಿವರಗಳು | ಷೆಡ್ಯೂಲ ಸಂಖ್ಯೆ | ದಿ. 31–3–2024ಕ್ಕೆ ರಕಮು | ಆದಾಯದ ವಿವರಗಳು | ಷೆಡ್ಯೂಲ ಸಂಖ್ಯೆ | ದಿ. 31–3–2024ಕ್ಕೆ ರಕಮು |
|---|---|---|---|---|---|
| ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 11 | 3,68,83,573–00 | ಗುಂತಾವಣೆಗಳಿಂದ ಬಂದ ಬಡ್ಡಿ | 20 | 2,85,88,239–75 |
| ಸಾಲಗಳ ಮೇಲೆ ಪಾವತಿಸಿದ ಬಡ್ಡಿ | | 12,90,021–00 | ಸಾಲಗಳ ಮೇಲೆ ಬಂದ ಬಡ್ಡಿ | 21 | 4,77,86,500–63 |
| ಬ್ಯಾಂಕುಗಳ ಕಮೀಷನ್ | | 12,016–36 | ಕಮೀಷನ್ | | 65,800–73 |
| ಸಿಬ್ಬಂದಿ ವೆಚ್ಚ | 12 | 1,25,26,455–00 | ಇತರೆ ಆದಾಯ | 22 | 37,36,693–23 |
| ಬಾಡಿಗೆ ಮತ್ತು ಕರ | 13 | 4,20,100–00 | | | |
| ವಿದ್ಯುಚ್ಛಕ್ತಿ ಮತ್ತು ನಿರ್ವಹಣೆ | | 2,47,228–00 | | | |
| ಪ್ರವಾಸ ವೆಚ್ಚ | | 85,339–00 | | | |
| ಅಂಚೆ ಮತ್ತು ದೂರವಾಣಿ | 14 | 37,648–00 | | | |
| ಸ್ಟೇಷನರಿ ವ ಮುದ್ರಣ, | 15 | 3,39,352–10 | | | |
| ಕಾನೂನು ವೆಚ್ಚ | | 65,600–00 | | | |
| ವಿಮೆ | 16 | 8,28,224–00 | | | |
| ಇತರೆ ವೆಚ್ಚಗಳು | 17 | 29,07,341–90 | | | |
| ಸವಕಳಿ, ಮತ್ತು ನಿರ್ವಾಹಣಾ ವೆಚ್ಚ | 18 | 7,32,267–00 | | | |
| ಆಡಳಿತ ಮಂಡಳಿ ವೆಚ್ಚ | 19 | 9,18,697–00 | | | |
| ಆದಾಯ ತೆರಿಗೆ ಮುಂಚಿತ ಲಾಭ | | 2,28,83,371–98 | | | |
| ಒಟ್ಟು | | 8,01,77,234–34 | ಒಟ್ಟು | | 8,01,77,234–34 |
| ಆದಾಯ ತೆರಿಗೆ | | 48,69,130–00 | ಆದಾಯ ತೆರಿಗೆ ಮುಂಚಿತ ಲಾಭ | | 2,28,83,371–98 |
| ಸುಸ್ತಿಸಾಲಗಳಿಗಾಗಿ ಮುನ್ನೇರ್ಪಾಡು(ಪ್ರಾವಿಜನ್) | | 16,40,000.00 | | | |
| ತೆರಿಗೆ ನಂತರದ ನಿವ್ವಳ ಲಾಭ | | 1,63,74,241–98 | | | |
| ಒಟ್ಟು | | 2,28,83,371–98 | ಒಟ್ಟು | | 2,28,83,371–98 |

## ಅಢಾವೆ ಪತ್ರಿಕೆಗಳ ವಿವರಣೆ / ಷೆಡ್ಯುಲ್‌ಗಳು

**1. ಶೇರು ಬಂಢವಾಳ**

| | |
|---|---|
| 1. ಪಾವತಿಸಿದ ಶೇರು ಬಂಡವಾಳ | 1,90,87,039.00 |
| 2. ಸಹ ಸದಸ್ಯತ್ವ | 55,900.00 |
| **ಒಟ್ಟು** | **1,91,42,939.00** |

**2. ಮೀಸಲು ಮತ್ತು ಇತರೆ ನಿಧಿಗಳು**

| | |
|---|---|
| 1. ಕಾಯ್ದಿಟ್ಟ (ಮೀಸಲು) ನಿಧಿ | 11,41,29,485.93 |
| 2. ಕಟ್ಟಡ ನಿಧಿ | 89,35,401.00 |
| 3. ಅನಿರೀಕ್ಷಿತ ಅವಕಾಶಗಳ ಮೀಸಲು ನಿಧಿ | 5,13,059.85 |
| 4. ಸಾಮಾನ್ಯ ಕ್ಷೇಮ ನಿಧಿ | 1,28,982.09 |
| 5. ಶಿಕ್ಷಣ ನಿಧಿ | 1,28,492.66 |
| 6. ಸಂಶಯಾತ್ಮಕ ಸಾಲಗಳ (ಎನ್.ಪಿ.ಎ.)ನಿಧಿ | 2,63,65,979.00 |
| 7. ಸಂಶಯಾತ್ಮಕ ಸಾಲ ನಿಧಿ (ಆದಾಯ ತೆರಿಗೆ ಕಾಯ್ದೆಯನ್ವಯ) | 1,42,42,784.00 |
| 8. ಗುಂತಾವಣೆ ಸವಕಳಿ ನಿಧಿ | 69,07,842.00 |
| 9. ಮಹೋತ್ಸವ ನಿಧಿ | 14,54,176.00 |
| **ಒಟ್ಟು** | **17,28,06,202.53** |

**3. ಠೇವಣಿಗಳು**

| | |
|---|---|
| 1. ಚಾಲ್ತಿ ಖಾತೆ ಠೇವಣಿ | 7,85,00,072.70 |
| 2. ಉಳಿತಾಯ ಖಾತೆ ಠೇವಣಿ | 17,65,47,507.68 |
| 3. ಮುದ್ದತು ಠೇವಣಿಗಳು | 44,46,24,619.00 |
| 4. ನಿರಂತರ(ಆವರ್ತನ) ಠೇವಣಿ | 1,76,88,563.00 |
| 5. ಓ.ಡಿ. ಖಾತೆಗಳಲ್ಲಿ ಜಮಾ | 84,73,293.78 |
| **ಒಟ್ಟು** | **72,58,34,056.16** |

**5. ಇತರೆ ಜವಾಬ್ದಾರಿಗಳು**

| | |
|---|---|
| 1 CLEARING SUSPENSE | 38,030.00 |
| 2 ಪಾವತಿಸಬೇಕಾದ ಡಿವಿಡೆಂಡ್ | 22,99,330.00 |
| 3 ಅಂಗನವಾಡಿ ಕಾರ್ಯಕರ್ತೆಯರ ಸಂಬಳ ಅಮಾನತ್ | 37,669.00 |
| 4 ಲೆಕ್ಕಪರಿಶೋಧನಾ ಶುಲ್ಕ ಪಾವತಿಸಬೇಕಾದ್ದು | 1,35,000.00 |
| 5 ಇತರೆ ಪಾವತಿಸಬೇಕಾದ ಬಾಕಿಗಳು | 2,74,420.00 |
| 6 ಪೇ ಆರ್ಡರ್ | 42,609.00 |
| 7 ಸಾಲದ ವಿಮೆ ಪಾವತಿಸಬೇಕಾದ್ದು | 1,32,392.00 |
| 8 ಸಿಬ್ಬಂದಿ ಬೋನಸ್ | 15,04,986.00 |
| 9 ವೃತ್ತಿ ತೆರಿಗೆ | 2,200.00 |
| 10 ಭವಿಷ್ಯ ನಿಧಿ ಪಾವತಿಸಬೇಕಾದ್ದು | 75,375.00 |
| 11 ಡಿ.ಡಿ.ಪಾವತಿಸಬೇಕಾದ್ದು | 4,55,217.34 |
| 12 ಸಾಲದ ವಿಮೆ ಪಾವತಿಸಬೇಕಾದ್ದು | 10,44,194.00 |
| 13 ಸ್ಟಾಂಡರ್ಡ ಅಸೆಟ್‌ಗಾಗಿ ಪ್ರಾವಿಜನ್ | 13,00,000.00 |
| 14 ಹಣದುರುಪಯೋಗದ ಮೀಸಲು | 1,07,55,557.77 |
| 15 ಕ್ಯಾಶ ಕ್ರೆಡಿಟ್ ಖಾತೆಗಳ ಜಮಾ | 10,900.00 |
| 16 ಟಿ.ಡಿ.ಎಸ್.ಪಾವತಿಸಬೇಕಾದ್ದು | 2,04,433.00 |
| 17 ಲಾಕರ್ ಬಾಡಿಗೆ | 32,214.00 |
| 18 ಸಿಬ್ಬಂದಿ ಜೀವ ವಿಮೆ | 5,48,427.00 |
| 19 ODIR - As per Contra | 1,23,90,034.00 |
| 20 ಶಾಖೆ ಹೊಂದಾಣಿಕೆಗಳು As per Contra | 21,57,57,780.52 |
| 21 ಲಾಕರ್ ಬಾಡಿಗೆ ಬರಬೇಕಾದ್ದು | 32,214.00 |
| **ಒಟ್ಟು** | **24,70,40,768.63** |

**6. ಬ್ಯಾಂಕುಗಳಲ್ಲಿರುವ ಶಿಲ್ಕು**

| | |
|---|---|
| 1 ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ | 1,41,56,371.5 |
| 2 ಕೆನರಾ ಬ್ಯಾಂಕ್ ಖಾತೆ | 4,33,596.79 |
| 3 ಐ ಡಿ ಬಿ ಐ ಬ್ಯಾಂಕ್, ಹುಬ್ಬಳ್ಳಿ | 8,77,450.82 |
| 4 ಐ ಡಿ ಬಿ ಐ ಬ್ಯಾಂಕ್, ಗಂಗಾವತಿ | 2,16,07,246.84 |
| 5 ಐ ಡಿ ಬಿ ಐ ಬ್ಯಾಂಕ್, ಗಂಗಾವತಿ (IMPS/ATM) | 49,98,424.20 |
| 6 ಆರ್.ಡಿ.ಸಿ.ಸಿ.ಬ್ಯಾಂಕ್, ಗಂಗಾವತಿ | 23,79,954.00 |
| 7 ಹೆಚ್.ಡಿ.ಎಫ್.ಸಿ.ಬ್ಯಾಂಕ್, ಬೆಂಗಳೂರು | 2,23,24,970.08 |
| 8 ಏಕ್ಸಿಸ್ ಬ್ಯಾಂಕ್, ಗಂಗಾವತಿ | 19,41,716.69 |
| 9 ಐಸಿಐಸಿಐ ಬ್ಯಾಂಕ್, ಗಂಗಾವತಿ | 2,06,64,073.45 |
| 10 ಐ.ಡಿ.ಎಫ್.ಸಿ.ಫಸ್ಟ್ ಬ್ಯಾಂಕ್ | 1,466.00 |
| 11 ಯೆಸ್ ಬ್ಯಾಂಕ್,ಕೊಪ್ಪಳ ಚಾಲ್ತಿ ಖಾತೆ | 95,929.00 |
| 12 ಯೆಸ್ ಬ್ಯಾಂಕ್ ಸಿ.ಪಿ.ಸಿ | 2,02,51,267.84 |
| **ಒಟ್ಟು** | **10,97,32,467.24** |

**7. ಗುಂತಾವಣೆಗಳು**

**ಮುದ್ದತು ಠೇವಣಿಗಳು**

| | |
|---|---|
| 1 ಆರ್.ಡಿ.ಸಿ.ಸಿ ಬ್ಯಾಂಕಿನಲ್ಲಿ ಮುದ್ದತು ಠೇವು | 3,17,07,862.00 |
| 2 ಯುನಿಟಿ ಸ್ಮಾಲ್ ಫೈನಾನ್ಸ ಬ್ಯಾಂಕ್ | 2,00,00,000.00 |
| 3 ಐ ಡಿ ಬಿ ಐ ಬ್ಯಾಂಕ್, ಗಂಗಾವತಿ | 63,82,399.00 |
| 4 ಫಡರಲ್ ಬ್ಯಾಂಕ್ | 25,00,000.00 |
| 5 ಪ್ರಗತಿಕೃಷ್ಣ ಗ್ರಾಮೀಣ ಬ್ಯಾಂಕಿನಲ್ಲಿ ಮುದ್ದತು ಠೇವು | 10,00,000.00 |
| 6 ಹೆಚ್.ಡಿ.ಎಫ್.ಸಿ.ಬ್ಯಾಂಕ್, ಬೆಂಗಳೂರು | 10,00,000.00 |
| 7 ಈಕ್ವಿಟಾಸ್ ಸ್ಮಾಲ್ ಫೈನಾನ್ಸ ಬ್ಯಾಂಕ್, ಹೊಸಪೇಟೆ | 28,43,705.00 |
| 8 ಕೆನರಾ ಬ್ಯಾಂಕ್ ಮುದ್ದತು ಠೇವು | 15,00,000.00 |
| **ಒಟ್ಟು** | **6,69,33,966.00** |

## ಅಢಾವೆ ಪತ್ರಿಕೆಗಳ ವಿವರಣೆ / ಷೆಡ್ಯುಲ್‌ಗಳು

**ಕೇಂದ್ರ ಭದ್ರತಾ ಪತ್ರ / ರಾಜ್ಯ ಸರಕಾರಿ ಪತ್ರಗಳಲ್ಲಿ**

| | |
|---|---|
| 1 6.01% ಕೇಂದ್ರ ಭದ್ರತಾ ಪತ್ರ-2028 | 40,00,000.00 |
| 2 8.26% ಕೇಂದ್ರ ಭದ್ರತಾ ಪತ್ರ-2027 | 98,46,000.00 |
| 3 8.28% ಕೇಂದ್ರ ಭದ್ರತಾ ಪತ್ರ-2027 | 48,88,500.00 |
| 4 6.19% ಕೇಂದ್ರ ಭದ್ರತಾ ಪತ್ರ-2034 | 99,63,000.00 |
| 5 6.22% ಕೇಂದ್ರ ಭದ್ರತಾ ಪತ್ರ-2035 | 1,91,86,000.00 |
| 6 6.57% ಕೇಂದ್ರ ಭದ್ರತಾ ಪತ್ರ-2036 | 99,33,000.00 |
| 7 6.67% ಕೇಂದ್ರ ಭದ್ರತಾ ಪತ್ರ-2035 | 4,89,00,000.00 |
| 8 6.77% KARNATAKA SDL 2034 | 95,00,000.00 |
| 9 7.82% ಕರ್ನಾಟಕ ಎಸ್.ಡಿ.ಎಲ್.2027 | 96,15,000.00 |
| 10 8.08%ತ.ನಾಡು ರಾಜ್ಯ ಸರಕಾರಿ ಪತ್ರ-2028 | 99,76,000.00 |
| 11 8.18% ತ.ನಾಡು ರಾಜ್ಯ ಸರಕಾರಿ ಪತ್ರ-2028 | 99,30,000.00 |
| 12 7.20% ಮಹಾರಾಷ್ಟ್ರ ರಾಜ್ಯ ಸರಕಾರಿ ಪತ್ರ-2027 | 48,97,500.00 |
| 13 6.78% ಮಹಾರಾಷ್ಟ್ರ ರಾಜ್ಯ ಸರಕಾರಿ ಪತ್ರ-2031 | 4,93,90,000.00 |
| 14 7.04% ಕೇರಳ ರಾಜ್ಯ ಸರಕಾರಿ ಪತ್ರ-2034 | 4,92,50,000.00 |
| ಒಟ್ಟು | 24,92,75,000.00 |

| | |
|---|---|
| **ನಾನ್ ಎಸ್.ಎಲ್.ಆರ್.ಹೂಡಿಕೆಗಳಲ್ಲಿ** | **11,09,867.44** |

**ಸಹಕಾರಿ ಶೇರುಗಳಲ್ಲಿ**

| | |
|---|---|
| ಆರ ಡಿ.ಸಿ.ಸಿ ಬ್ಯಾಂಕಿನಲ್ಲಿ ಶೇರಿನಲ್ಲಿ | 25,000.00 |
| 1 ಸೌಹಾರ್ದ ಸಹಕಾರಿ ಒಕ್ಕೂಟ ಶೇರಿನಲ್ಲಿ | 1,000.00 |
| 2 ಬಸವೇಶ್ವರ ಸುದ್ದಿಮಾಧ್ಯಮ ಸಹಕಾರಿ ಸಂಸ್ಥೆ ಶೇರು | 1,00,000.00 |
| 3 ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಶೇರು | 25,000.00 |
| ಒಟ್ಟು | 1,51,000.00 |
| **ಒಟ್ಟು ಗುಂತಾವಣೆಗಳು** | **31,74,69,833.44** |

**8. ಸಾಲ ಮತ್ತು ಮುಂಗಡಗಳು**

| | |
|---|---|
| 1 ಬಂಗಾರ ಆಭರಣಗಳ ಮೇಲಿನ ಸಾಲ | 42,63,555.00 |
| 2 ಓವರ್ ಡ್ರಾಫ್ಟ ಸಾಲ | 3,95,38,664.55 |
| 3 ಗೋದಾಮು ಸಾಲ | 20,05,04,698.60 |
| 4 ಆವರ್ತನ ಠೇವಣಿ ಮೇಲಿನ ಸಾಲ | 3,51,013.00 |
| 5 ಮುದ್ದತು ಠೇವುಗಳ ಮೇಲಿನ ಸಾಲ | 55,97,117.00 |
| 6 ವ್ಯವಹಾರ ಸಾಲ | 1,50,57,878.00 |
| 7 ವತ್ತಿ ಸಾಲ (ಮಾರ್ಟಗೇಜ) | 17,95,96,303.72 |
| 8 ಭದ್ರತಾ ಪತ್ರಗಳ ಮೇಲಿನ ಸಾಲ | 8,69,669.00 |
| 9 ವಾಹನ ಸಾಲ | 33,63,683.00 |
| 10 ಜಾಮೀನು ಸಾಲ | 20,51,352.00 |
| 11 ಸಂಬಳ ಆಧಾರಿತ ಸಾಲ | 2,69,89,910.00 |
| 12 ಗೃಹ ನಿರ್ಮಾಣ ಸಾಲ | 1,37,14,729.00 |
| 13 ಸಿಬ್ಬಂದಿ ಗೃಹ ಸಾಲ | 37,90,194.00 |
| 14 ಇತರೆ | 130.00 |
| **ಒಟ್ಟು** | **49,56,88,896.87** |

**9. ಚರಾಸ್ತಿಗಳು**

| | |
|---|---|
| 1 ನಿವೇಶನ | 12,94,700.00 |
| 2 ಆಟೋಮೇಶನ್ ಉಪಕರಣಗಳು | 4,21,111.00 |
| 3 ಫರ್ನಿಚರ್ | 4,24,463.60 |
| 4 ಜನರೇಟರ್ | 15,884.00 |
| 5 ಹವಾನಿಯಂತ್ರಕಗಳು | 1,83,957.00 |
| 6 ಗಣಕ ಯಂತ್ರಗಳು | 2,68,792.00 |
| 7 ಇತರೆ ಚರ ಉಪಕರಣಗಳು | 5,23,480.00 |
| 8 ಸೋಲಾರ್ ಉಪಕರಣ | 44,541.00 |
| **ಒಟ್ಟು** | **31,76,928.60** |

**10. ಇತರೆ ಆಸ್ತಿಗಳು(ಬರತಕ್ಕವುಗಳು**

| | |
|---|---|
| 1 ಸ್ಟೇಶನರಿ | 2,03,284.00 |
| 2 ಹಣದುರುಪಯೋಗದ ಮೊತ್ತ ಬರಬೇಕಾದ್ದು | 1,06,69,315.77 |
| 3 ಸಿಬ್ಬಂದಿ ಹಬ್ಬದ ಮುಂಗಡ | 33,000.00 |
| 4 ಇತರೆ ಮುಂಗಡ | 2,33,362.00 |
| 5 ಗುಂತಾವಣೆಗಳ ಮೇಲಿನ ಬಡ್ಡಿ ಬರಬೇಕಾದ್ದು | 78,39,320.67 |
| 6 ಆದಾಯ ತೆರಿಗೆ ಮುಂಗಡ(2011-12) | 3,07,978.00 |
| 7 ಎನ್.ಪಿ.ಸಿ.ಐ ಪಾವತಿ | 384.19 |
| 8 ಲಾಕರ್ ಬಾಡಿಗೆ ಬರತಕ್ಕದ್ದು | 32,214.00 |
| As per Contra | |
| ಸಾಲದ ಮೇಲೆ ಬರತಕ್ಕಂತ ಬಡ್ಡಿ | 1,23,90,034.00 |
| ಶಾಖೆ ಹೊಂದಾಣಿಕೆಗಳು | 21,57,57,780.52 |
| **ಒಟ್ಟು** | **24,74,66,673.15** |

## ಲಾಭ ಹಾನಿ ಪತ್ರಿಕೆಗಳ ವಿವರಣೆ / ಷೆಡ್ಯುಲ್‌ಗಳು

### 11. ಬಡ್ಡಿ

| | | |
|---|---|---|
| 1 | ಉಳಿತಾಯ ಖಾತೆ ಠೇವಣಿ ಮೇಲಿನ ಬಡ್ಡಿ | 40,89,980.00 |
| 2 | ಮುದ್ದತು ಠೇವುಗಳ ಮೇಲೆ ಪಾವತಿಸಿದ ಬಡ್ಡಿ | 3,13,77,181.00 |
| 3 | ಆವರ್ತನ ಠೇವುಗಳ ಮೇಲಿನ ಬಡ್ಡಿ | 14,16,412.00 |
| | **ಒಟ್ಟು** | **3,68,83,573.00** |

### 12. ಸಿಬ್ಬಂದಿ ವೆಚ್ಚ

| | | |
|---|---|---|
| 1 | ಸಂಬಳ | 90,45,862.00 |
| 2 | ಭವಿಷ್ಯ ನಿಧಿ ವಂತಿಗೆ | 9,00,864.00 |
| 3 | ವಿಮೆ ಮತ್ತು ಉಪವಂತಿಗೆ | 8,49,911.00 |
| 4 | ಇತರೆ ಭತ್ಯೆಗಳು | 77,508.00 |
| 5 | ಪ್ರವಾಸ/ತರಬೇತಿ ವೆಚ್ಚ | 1,47,324.00 |
| 6 | ಬೋನಸ್ (ಎಕ್ಸಗ್ರೇಷಿಯಾ) | 15,04,986.00 |
| | **ಒಟ್ಟು** | **1,25,26,455.00** |

### 13.ಬಾಡಿಗೆ ಮತ್ತು ಕರ

| | | |
|---|---|---|
| 1 | ಕಟ್ಟಡ ಬಾಡಿಗೆ | 4,20,000.00 |
| 2 | ವೃತ್ತಿ ತೆರಿಗೆ | 100.00 |
| | **ಒಟ್ಟು** | **4,20,100.00** |

### 14.ಅಂಚೆ ಮತ್ತು ತಂತಿ

| | | |
|---|---|---|
| 1 | ಅಂಚೆ ವೆಚ್ಚ | 8,786.00 |
| 2 | ದೂರವಾಣಿ | 28,862.00 |
| | **ಒಟ್ಟು** | **37,648.00** |

### 15. ಸ್ಟೇಶನರಿ ವ ಮುದ್ರಣ

| | | |
|---|---|---|
| 1 | ಸ್ಟೇಶನರಿ ವ ಮುದ್ರಣ | 1,78,900.00 |
| 2 | ಜಾಹೀರಾತು ಮತ್ತು ಪ್ರಚಾರ | 1,60,452.10 |
| | **ಒಟ್ಟು** | **3,39,352.10** |

### 16 ವಿಮೆ

| | | |
|---|---|---|
| 1 | ಬ್ಯಾಂಕ್ ಆಸ್ತಿಗಳ ಮೇಲಿನ ವಿಮೆ | 38,696.00 |
| 2 | ಠೇವಣಿ ವಿಮೆ | 7,89,528.00 |
| | **ಒಟ್ಟು** | **8,28,224.00** |

### 17. ಇತರೆ ವೆಚ್ಚಗಳು

| | | |
|---|---|---|
| 1 | ವಾರ್ಷಿಕೋತ್ಸವ ವೆಚ್ಚ | 21,850.00 |
| 2 | ಗಣಕಯಂತ್ರ ಬಿಡಿಭಾಗಗಳು | 70,680.00 |
| 3 | ವಾರ್ತಾಪತ್ರಿಕೆ ಮತ್ತು ನಿಯತಕಾಲಿಕೆಗಳು | 1,460.00 |
| 4 | ವಾಹನ ಬಾಡಿಗೆ ಮತ್ತು ಇಂಧನ | 73,578.00 |
| 5 | ಸದಸ್ಯತ್ವ ಶುಲ್ಕಗಳು | 1,43,900.00 |
| 6 | ಕಛೇರಿ ವೆಚ್ಚ | 1,63,221.00 |
| 7 | ಸ್ಥಳೀಯ ಸಾರಿಗೆ | 2,320.00 |
| 8 | ಸಾಮಾನ್ಯ ಸಭೆ ವೆಚ್ಚಗಳು | 2,40,130.00 |
| 9 | ಲೆಕ್ಕಪರಿಶೋಧನೆ ಮತ್ತು ಸಲಹಾ ಶುಲ್ಕಗಳು | 3,60,000.00 |
| 10 | ಸದಸ್ಯರ ಮರಣೋತ್ತರ ಪರಿಹಾರ | 65,000.00 |
| 11 | ವಾರ್ಷಿಕ ನಿರ್ವಹಣಾ ಶುಲ್ಕಗಳು (ಎ.ಎಮ್.ಸಿ.) | 1,70,170.00 |
| 12 | ಅತಿಥಿ ವೆಚ್ಚಗಳು | 55,906.00 |
| 13 | ಸಾಲ ವಸೂಲಾತಿ ವೆಚ್ಚ | 8,965.00 |
| 14 | ಸೇವಾ ತೆರಿಗೆ/ಜಿ.ಎಸ್.ಟಿ. | 3,53,741.90 |
| 15 | ನೇವಕಾತಿ ವೆಚ್ಚ | 1,38,944.00 |
| 16 | ಶಾಖೆ ಉದ್ಘಾಟನೆ ವೆಚ್ಚ | 39,750.00 |
| 17 | ತಂತ್ರಾಂಶ ವೆಚ್ಚ (ಸಾಫ್ಟವೇರ ಚಾರ್ಜಸ್) | 5,61,725.00 |
| 18 | ದೇಣಿಗೆ | 36,001.00 |
| 19 | ಸ್ಟಾಂಡರ್ಡ ಅಸೆಟ್‌ಗಾಗಿ ಪ್ರಾವಿಜನ್ | 4,00,000.00 |
| | **ಒಟ್ಟು** | **29,07,341.90** |

### 18.ಸವಕಳಿ ಮತ್ತು ನಿರ್ವಹಣೆ ವೆಚ್ಚ

| | | |
|---|---|---|
| 1 | ಸವಕಳಿ | 3,73,517.00 |
| 2 | ರಿಪೇರಿ ಮತ್ತು ನಿರ್ವಹಣೆ | 3,58,750.00 |
| | **ಒಟ್ಟು** | **7,32,267.00** |

### 19. ಆಡಳಿತ ಮಂಡಳಿ ವೆಚ್ಚ

| | | |
|---|---|---|
| 1 | ಗೌರವ ಧನ | 2,40,000.00 |
| 2 | ಸಭಾ ವೆಚ್ಚಗಳು | 23,001.00 |
| 3 | ನಿರ್ದೇಶಕರ ಸಭಾ ಭತ್ಯೆ | 3,00,000.00 |
| 4 | ಪ್ರವಾಸ ವೆಚ್ಚ | 33,709.00 |
| 5 | ಗುಂಪು ಆರೋಗ್ಯವಿಮೆ | 3,21,987.00 |
| | **ಒಟ್ಟು** | **9,18,697.00** |

### 20. ಗುಂತಾವಣೆಗಳ ಮೇಲೆ ಬಂದ ಬಡ್ಡಿ

| | | |
|---|---|---|
| 1 | ಭದ್ರತಾ ಪತ್ರಗಳ/ಮುದ್ದತು ಠೇವುಗಳ ಮೇಲೆ ಬಂದ ಬಡ್ಡಿ | 2,61,14,359.47 |
| 2 | ಮ್ಯುಚುವಲ್ ಫಂಡ್ ಹೂಡಿಕೆಯಿಂದ ಬಂದ ಬಡ್ಡಿ | 24,73,880.28 |
| | **ಒಟ್ಟು** | **2,85,88,239.75** |

### 21. ಬಡ್ಡಿ ಬಂದದ್ದು

| | | |
|---|---|---|
| 1 | ಬಂಗಾರ ಸಾಲದ ಮೇಲಿನ ಬಡ್ಡಿ | 4,11,903.00 |
| 2 | ಗೋದಾಮು ಸಾಲದ ಮೇಲಿನ ಬಡ್ಡಿ | 1,45,03,235.00 |
| 3 | ಜಾಮೀನು ಸಾಲದ ಬಡ್ಡಿ | 2,68,702.00 |
| 4 | ವ್ಯವಹಾರ ಸಾಲದ ಮೇಲಿನ ಬಡ್ಡಿ | 9,15,307.00 |
| 5 | ಮುದ್ದತು ಠೇವುಗಳ ಮೇಲಿನ ಸಾಲದ ಬಡ್ಡಿ | 5,98,673.00 |
| 6 | ವಾಹನ ಸಾಲದ ಮೇಲಿನ ಬಡ್ಡಿ | 3,81,085.00 |
| 7 | ಓವರಡ್ರಾಫ್ಟ ಸಾಲದ ಮೇಲಿನ ಬಡ್ಡಿ | 33,88,286.63 |
| 8 | ಗೃಹ ನಿರ್ಮಾಣ ಸಾಲದ ಬಡ್ಡಿ | 5,12,234.00 |

ಲಾಭ ಹಾನಿ ಪತ್ರಿಕೆಗಳ ವಿವರಣೆ / ಷೆಡ್ಯುಲ್‌ಗಳು

| | | |
|---|---|---|
| 9 | ಸಿಬ್ಬಂದಿ ಗೃಹಸಾಲದ ಮೇಲಿನ ಬಡ್ಡಿ | 52,339.00 |
| 10 | ಭದ್ರತಾ ಪತ್ರಗಳ ಮೇಲಿನ ಸಾಲದ ಬಡ್ಡಿ | 1,15,627.00 |
| 11 | ಆವರ್ತನ ಠೇವಣಿ ಮೇಲಿನ ಸಾಲದ ಬಡ್ಡಿ | 54,356.00 |
| 12 | ವತ್ತಿ ಸಾಲ ಮೇಲಿನ ಬಡ್ಡಿ | 2,30,77,826.00 |
| 13 | ಸಂಬಳ ಆಧಾರಿತ ಸಾಲ ಮೇಲಿನ ಬಡ್ಡಿ | 35,06,927.00 |
| | **ಒಟ್ಟು** | **4,77,86,500.63** |

**22. ಇತರೆ ಆದಾಯ**

| | | |
|---|---|---|
| 1 | ಸಾಲದ ಅರ್ಜಿ ಶುಲ್ಕ | 33,842.00 |
| 2 | ಪ್ರೋಸೆಸಿಂಗ್ ಶುಲ್ಕ | 30,52,590.00 |
| 3 | ಶೇರು ಶುಲ್ಕ | 10,450.00 |
| 4 | ಉಳಿತಾಯ/ಚಾಲ್ತಿ ಖಾತೆಗಳ ಮೇಲಿನ ಶುಲ್ಕಗಳು | 2,00,241.73 |
| 5 | ಚೆಕ್ ಪುಸ್ತಕದ ಶುಲ್ಕಗಳು | 82,176.68 |
| 6 | ಲಾಕರ್ ಬಾಡಿಗೆ | 2,05,770.00 |
| 7 | ಇತರೆ | 1,51,622.82 |
| | **ಒಟ್ಟು** | **37,36,693.23** |

## INDEPENDENT AUDITOR'S REPORT

To
The Members/Beneficiaries
Sri Channabasavaswamy Souharda Sahakari Bank Niyamitha,
Gangavathi.

**Report on the Financial Statements**

We have audited the accompanying financial statements of **Sri Channabasavaswamy Souharda Sahakari Bank Niyamitha, Gangavathi** which comprises the Balance Sheet as at March 31, 2024, the Profit and Loss Account for the year then ended, and a summary of significant accounting policies and other explanatory information which we have signed under reference to this report.

**Management's Responsibility for the Financial Statements**
The banks management is responsible for the preparation of these financial statements that give a true and fair view of the financial position and financial performance of the bank in accordance with the Banking Regulation Act, 1949, complying with RBI guidelines from time to time. This responsibility includes the design, implementation and maintenance of internal control relevant to the preparation and fair presentation of the financial statements that give a true and fare view and are free from material misstatement, whether due to fraud or error.

**Auditor's Responsibility**
Our responsibility is to express an opinion on these financial statements based on our audit. We conducted our audit in accordance with the Standards on Auditing issued by the Institute of Chartered Accountants of India. ThoseStandards require that we plan and perform the audit to obtain reasonable assurance about whether the financial statements are free from material misstatement.

An audit involves performing procedures to obtain audit evidence about the amounts and disclosures in the financial statements. The procedures selected depend on the auditor's

judgment, including the assessment of the risks of material misstatement of the financial statements, whether due to fraud or error. In making those risk assessments, the auditor considers internal control relevant to the entity's preparation and fair presentation of the financial statements in order to design audit procedures that are appropriate in the circumstances. An audit also includes evaluating the appropriateness of accounting policies used and the reasonableness of the accounting estimates made by management, as well as evaluating the overall presentation of the financial statements.

We believe that the audit evidence we have obtained is sufficient and appropriate to provide a basis for our audit opinion.

**Opinion**

In our opinion and to the best of our information and according to the explanations given to us, the financial statements give the information required by the Banking Regulation Act, 1949 (AACS) and Karnataka Souharda Sahakari Act, 1997 and rules made there under, in the manner so required and give a true and fair view in conformity with the accounting principles generally accepted in India and

a. In case of the Balance Sheet, of the state of affairs of the bank as on 31.03.2024. and
b. In case of the Profit and Loss Account, of the profit for the year ended on that date.

**Report on other Legal and Regulatory Matters**

The Balance sheet and Profit and Loss account has been drawn up in accordance with the provisions of Section 29 of Banking Regulation Act 1949 (as applicable to co-operative societies).

ubject to the limitation of the audit as indicated in the paragraph 3 to 5 above we report that:

a. We have obtained all the information and explanations, which to the best of our knowledge and belief were necessary for the purpose of our audit and have found them to be satisfactory.
b. The transactions of the bank which have come to our notice have been within the powers of the bank.
c. In our opinion proper books of accounts as required by law have been kept by the bank so far as appears from our examination of those books.
d. The balance sheet and profit and loss account dealt with by this report are in agreement with the books of accounts maintained by the bank.

Sri S. M. Inchalmath & Co.,
Chartered Accountants
Sign/-
N. G. Hiremath
M.No. 024786 FRN No. 103746 W

Date : 22.06.2024
Place :Gangavathi

## ಸದಸ್ಯರಿಗೆ ಸಲಹೆಗಳು

1. ಸದಸ್ಯರು ಲಾಭಾಂಶವನ್ನು ಪಡೆಯದೆ ಇದ್ದಲ್ಲಿ ಆ ಮೊತ್ತವನ್ನು ಮೂರು ವರ್ಷಗಳ ನಂತರ ಕಾಯ್ದಿಟ್ಟ ನಿಧಿಗೆ ವರ್ಗಾವಣೆ ಮಾಡಲಾಗುತ್ತದೆ. ಕಾರಣ ಸದಸ್ಯರು ಕೂಡಲೇ ಲಾಭಾಂಶ ಪಡೆಯಲು ಸೂಚಿಸಲಾಗಿದೆ. ಉಳಿತಾಯ ಖಾತೆ ಹೊಂದಿರದ ಸದಸ್ಯರು ಡಿವಿಡೆಂಡ್‌ನ್ನು ಶೀಘ್ರವೇ ಪಡೆಯಲು ಉಳಿತಾಯ ಖಾತೆಯನ್ನು ತೆರೆಯಲು ವಿನಂತಿಸಿದೆ.
2. ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳನ್ನೆಲ್ಲಾ ನಿಮ್ಮ ಬ್ಯಾಂಕಿನಲ್ಲಿಯೇ ಮಾಡಿ, ಸದಸ್ಯರ ಹಕ್ಕು ಚಲಾಯಿಸಲು ಕನಿಷ್ಠ ಬ್ಯಾಂಕಿಂಗ್ ವ್ಯವಹಾರ ಮತ್ತು ಮಹಾಸಭೆಯ ಹಾಜರಾತಿ ಅಗತ್ಯ.
3. ಜಾಮೀನುದಾರರಾದ ಸದಸ್ಯರು ತಾವು ಜಾಮೀನಾದ ಸಾಲದ ಸ್ಥಿತಿಯನ್ನು ಪರಿಶೀಲಿಸುತ್ತಿರಬೇಕು ಹಾಗೂ ಸಾಲಗಾರರಿಗೆ ಸಕಾಲಕ್ಕೆ ಕಂತುಗಳನ್ನು ಮರುಪಾವತಿಸಲು ಸೂಚಿಸಬೇಕು. ಇಲ್ಲವಾದಲ್ಲಿ ಸಾಲಕ್ಕೆ ತಾವೇ ಜವಾಬ್ದಾರರಾಗುತ್ತೀರಿ.

## ಸದಸ್ಯರು ಬಳಸಬೇಕಾದ ಕನಿಷ್ಠ ಸೇವೆಗಳು :

ಬ್ಯಾಂಕ್ ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು.

1. ಸದಸ್ಯನು ಹೊಂದಿರತಕ್ಕ ಕನಿಷ್ಠ ಶೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು.
2. ಸದಸ್ಯನು ಹೊಂದಿರತಕ್ಕ ಕನಿಷ್ಠ ನಿಶ್ಚಿತ ಠೇವಣಿಯು ( Term Deposit ) ಐದು ಸಾವಿರ ರೂಪಾಯಿಗಳು ಅಥವಾ ಸದಸ್ಯನು ತನ್ನ ಚಾಲ್ತಿ ಖಾತೆಯನ್ನು ಪ್ರತಿ ತಿಂಗಳು 2 ರಂತೆ ಕನಿಷ್ಠ 24 ಅಥವಾ ಉಳಿತಾಯ ಖಾತೆಯಲ್ಲಿ ಪ್ರತಿ ತಿಂಗಳು ಒಂದರಂತೆ ವರ್ಷದಲ್ಲಿ ಕನಿಷ್ಠ 12 ಬ್ಯಾಂಕಿಂಗ್ ವ್ಯವಹಾರ ನಡೆಸಬೇಕಾದ ಸಂಖ್ಯೆಯಾಗಿರುತ್ತದೆ.

   ಟಿಪ್ಪಣಿ : ಬ್ಯಾಂಕು ಆ ಖಾತೆಗಳಲ್ಲಿ ಹಾಕುವ ಜಮಾ-ಖರ್ಚು ವ್ಯವಹಾರಗಳನ್ನು ಹೊರತುಪಡಿಸಿ.

Notes on Accounts of Balance Sheet as on 31- 03 - 2024

| | | 31-03-2023 | 31-03-2024 |
|---|---|---|---|
| i | Capital to Risk Weight Asset Ratio (CRAR) | 28.59% | 20.5% |
| ii | Movement of CRAR | Decreased | |

iii Investments

a. Book Value & Face Value of Investments

| | |
|---|---|
| Book Value | 24,92,75,000.00 |
| Face Value | 25,40,00,000.00 |

b. Market Value of Investments 24,77,90,274.00

**Details of Issuer Composition of NON-SLR Investments and NON-Performing Non SLR Investments**

Issuer Composition of NON-SLR Investments

| No. | Issuer | Amount | investment Grade Securities | Extend of unrated Securities | Extend of unlisted Securities |
|---|---|---|---|---|---|
| 1 | 2 | 3 | 4 | 5 | 6 |
| 1. | PSU's | NIL | NIL | NIL | NIL |
| 2. | FI's | NIL | NIL | NIL | NIL |
| 3. | Public Sector Banks | NIL | NIL | NIL | NIL |
| 4. | Mutual Funds | 11,09,867 | NIL | NIL | NIL |
| 5. | Others | 1,51,000 | NIL | NIL | 1,51,000 |
| 6. | Provision held towards Depreciation | NIL | NIL | NIL | NIL |

**NON - Performing Non SLR Investments**

| | Particulars | Amount (In Crore) |
|---|---|---|
| | Opening Balance | |
| | Additions : During the Year | NIL |
| | Reduction : During the Year | |
| | Closing Balance | |
| | Total Provisions Held | |

| | | |
|---|---|---|
| iv | Advances against real estate. construction business, housing | 137.15 Lakhs |
| v | Advances against shares and debentures | NIL |
| vi | Advances to directors and their relatives, companies/firms in which they are interested | NIL |

a) Fund based

b) Non fund based (B.G./LC etc)

Vii Cost of deposits : Average cost of deposits 5.86%

viii NPAs

a) Gross NPAs 418.77 Lakhs

b) Net NPAs 12.69 Lakhs

ix Movement in NPAs i.e. Gross and net NPAs as on Balance Sheet date for the current year vis a vis Previous Year

| | Particulars | Amount (in Lakh) | Amount (in Lakh) |
|---|---|---|---|
| | | 31.03.2023 | 31.03.2024 |
| | Opening Balance | 309.64 | 352.49 |
| | Additions : During the year | 42.85 | 66.28 |
| | Reduction : During the year | 0.00 | |
| | Closing Balance | 352.49 | 418.77 |
| | **Total Provisions Held** | **356.5** | **406.08** |

**x Profitability** **Rs. in Lakhs)**

| | | | |
|---|---|---|---|
| | a) | Interest Income as a % of Working Funds | 5.20 |
| | b) | Non Interest Income as a % of working Funds | 0.41 |
| | c) | Operating profit as a % of Working Funds | 1.77 |
| | d) | Return on Assets | |
| | e) | Business (Deposits + Advances) per Emoployee | 77.08 |
| | f) | Profit per employee | 14.89 |
| | g) | Average Interest on Loans | 11.46 |
| | h) | Average Interest on Deposits | 5.86 |
| | i) | Yield | 9.44 |
| | j) | Spread | 3.59 |

**xi** Provisions made towards NPAs, depreciation in investments and Standard Assets

| | | |
|---|---|---|
| Provisions made towards NPAs | 356.50 | 406.08 |
| Provisions made towards depreciation in investments | 69.08 | 69.08 |
| Provisions made towards Standard Assets | 13.00 | 13.00 |

**xii** Movement in Provisions

| | 31.3.2023 | 31.3.2024 |
|---|---|---|
| Towards NPAs. | 90.05 | 49.58 |
| Towards depreciation in Investments | 0 | 0 |
| Towards Standard Assets | 0 | 4.00 |

**xiii** Foreign Currency Assets and Liabilities NIL

Xiv Payment of DICGC premium — Half-Yr Mar 2023: 4,80,631-00; Half-Yr Sep.2023: 4,51,013.00

X v Penalty imposed by RBI NIL

X v i Restructured Accounts NIL

xvii Fixed Assets valuation / Revaluation NIL

* The Bank does not have a compehencive policy for revaluation of Fixed Assets owned by them
* No fixed Assets are revalued during this financial year * No fixed Assets are appreciated
* Depreciation charged according to Income Tax rates and rules

xviii Amount Transferred to DEAF (Amount in Rs.)

| | Current Year | Previous Year |
|---|---|---|
| Opening balance of amount transferred to DEAF | 90083 | 85847 |
| Add : Amount transferred to DEAF during the year | 0 | 4236 |
| Less : Amount reimbursed by DEAF during the year | 0 | 0 |
| Closing balance of amount transferred to DEAF | 90083 | 90083 |

xix Datails of Special Mention Accounts

| Category | No.of A/cs | Amount (Rs.in Lakhs) |
|---|---|---|
| SMA 0 | 206 | 54.32 |
| SMA 1 | 85 | 26.59 |
| SMA 2 | 24 | 84.41 |
| | 315 | 165.32 |

**Sri S.M. Inchalamath & Co.,**
Chartered Accountants
Sd/-
**Nirajan Hiremath** C.A.
Partner
M.R. No. : 024786
F.R. No. : 103746W

Date : 22.06.2024
Place : Gangavathi

## ಸನ್ 2023–24ರ ಅಂದಾಜು ವಾಸ್ತವ, 2024-25 ರ (ಪರಿಷ್ಕೃತ) ಮತ್ತು 2025-26ರ (ಅಂದಾಜು) ಆದಾಯ ಹಾಗೂ ಖರ್ಚಿನ ಮುಂಗಡ ಪತ್ರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಆದಾಯದ ವಿವರಗಳು | 2023–2024ರ ಅಂದಾಜು | 2023–2024ರ ಸಾಲಿಗಾಗಿ ವಾಸ್ತವ ಆದಾಯ | 2024–25ರ ಅಂದಾಜು (ಪರಿಷ್ಕೃತ) | 2025–26ರ ತಾತ್ಕಾಲಿಕ ಅಂದಾಜು |
|---|---|---|---|---|---|
| 1. | ಸಾಲಗಳ ಮೇಲೆ ಬರಬಹುದಾದ ಬಡ್ಡಿ | 470.00 | 477.86 | 525.00 | 540.00 |
| 2. | ಗುಂತಾಯಿಕೆಗಳ ಮೇಲೆ ಬರಬಹುದಾದ ಬಡ್ಡಿ | 282.00 | 285.88 | 310.00 | 325.00 |
| 3. | ಕಮೀಷನ್ ಹಾಗೂ ಇತರೆ ಆದಾಯಗಳು | 30.00 | 38.03 | 40.00 | 45.00 |
| | ಒಟ್ಟು | 782.00 | 801.77 | 875.00 | 910.00 |

| ಕ್ರ. ಸಂ. | ಖರ್ಚಿನ ವಿವರಗಳು | 2023–24ನೇ ಸಾಲಿನ ಅಂದಾಜು | 2023–2024 ಸಾಲಿನ ವಾಸ್ತವ ಖರ್ಚು | 2024–25ರ ಅಂದಾಜು (ಪರಿಷ್ಕೃತ) | 2025–26ರ ತಾತ್ಕಾಲಿಕ ಅಂದಾಜು |
|---|---|---|---|---|---|
| 1. | ಠೇವಣಿ ಹಾಗೂ ಸಾಲ ಮೇಲಿನ ಬಡ್ಡಿ | 420.00 | 381.74 | 420.00 | 450.00 |
| 2. | ಸಿಬ್ಬಂದಿ ವೇತನ, ಬಾಡಿಗೆ, ವಿಮೆ, ವಿದ್ಯುಚ್ಛಕ್ತಿ | 130.00 | 133.95* | 142.00 | 145.00 |
| 3. | ಸ್ಟೇಷನರಿ, ಅಂಚೆ, ತಂತಿ, ಪ್ರಚಾರ ಹಾಗೂ ಟೆಲಿಫೋನ್ | 4.00 | 3.77 | 5.00 | 6.00 |
| 4. | ಸವಕಳಿ ಮತ್ತು ಕಂಪ್ಯೂಟರ್ ನಿರ್ವಹಣಾ ವೆಚ್ಚಗಳು | 12.00 | 9.02 | 14.00 | 12.00 |
| 5. | ಇನ್ನಿತರ ಖರ್ಚುಗಳು<br>ಆಡಳಿತಾತ್ಮಕ ಖರ್ಚುಗಳು, ಲೆಕ್ಕಪರಿಶೋಧನಾ ಶುಲ್ಕ, ತಾಂತ್ರಿಕ ವೆಚ್ಚಗಳು, ಠೇವಣಿ ವಿಮೆ, ಕಾನೂನು ವೆಚ್ಚ, ಸಂಘಗಳ ಸದಸ್ಯತ್ವ ಶುಲ್ಕಗಳು ಹಾಗೂ ಇನ್ನಿತರ ಖರ್ಚುಗಳು | 30.00 | 42.06* | 45.00 | 30.00 |
| 6. | ಸಾಮಾನ್ಯ ಸಭೆ ವೆಚ್ಚ | 3.00 | 2.40 | 3.00 | 4.00 |
| | ಒಟ್ಟು | 599.00 | 572.94 | 629.00 | 647.00 |
| | ನಿವ್ವಳ ಲಾಭ (ತೆರಿಗೆ ಮುಂಚೆ) | 183.00 | 228.83 | 246.00 | 263.00 |
| | ಒಟ್ಟು ಅಂದಾಜು | 782.00 | 801.77 | 875.00 | 910.00 |
| 7 | ನಿಯಮಗಳ ರೀತ್ಯಾ ಎನ್.ಪಿ.ಎ. ಪ್ರಾವ್ಹಿಜನ್ | 14.00 | 16.40 | 18.00 | 19.00 |
| 8 | ಆದಾಯ ತೆರಿಗೆಗಾಗಿ | 43.00 | 48.69 | 50.00 | 52.00 |
| | ನಿವ್ವಳ ಲಾಭ (ತೆರಿಗೆಯ ನಂತರ) | 126.00 | 163.74 | 178.00 | 192.00 |

### 2023–24 ರ ವಾಸ್ತವ, 2024–25 ರ ಪರಿಷ್ಕೃತ ಗುರಿ ಮತ್ತು 2025–26 ನೇ ಸಾಲಿಗಾಗಿ (ಅಂದಾಜು) ಬ್ಯಾಂಕಿನ ಗುರಿ

(ರೂ.ಕೋಟಿಗಳಲ್ಲಿ)

| ಕ್ರ. ಸಂ. | | 2023–24ರ ಅಂದಾಜು | 2023–24ರ ಸಾಲಿಗಾಗಿ ವಾಸ್ತವ | 2024–25ರ ಅಂದಾಜು ಪರಿಷ್ಕೃತ | 2025–26ರ ತಾತ್ಕಾಲಿಕ ಅಂದಾಜು |
|---|---|---|---|---|---|
| 1. | ಠೇವಣಿಗಳು | 71.00 | 72.58 | 78.00 | 85.00 |
| 2. | ಸಾಲ ಮತ್ತು ಮುಂಗಡ | **43.00** | **49.57** | 55.00 | 60.00 |
| 3. | ದುಡಿಯುವ ಬಂಡವಾಳ | 91–00 | **91–78** | 100–00 | 110–00 |

* ಕ್ರ.ಸಂಖ್ಯೆ.2 ಮತ್ತು 5 ರಲ್ಲಿ ಅಂದಾಜಿಗಿಂತ ಹೆಚ್ಚಳವಾಗಿದೆ (ಠೇವಣಿ ವಿಮೆ, ನೇಮಕಾತಿ ವೆಚ್ಚ, ತಂತ್ರಜ್ಞಾನ/ತಂತ್ರಾಂಶ ವೆಚ್ಚ, ಸ್ಟಾಂಡರ್ಡ್ ಅಸೆಟ್ಗಾಗಿ ಪ್ರಾವಿಜನ್ ನಲ್ಲಿ ಹೆಚ್ಚಳವಾಗಿರುತ್ತದೆ. ಉಳಿದಂತೆ ಇತರ ಎಲ್ಲಾ ಖರ್ಚುಗಳು ಅಂದಾಜಿನ ಮಿತಿಯಲ್ಲಿಯೇ ಇರುತ್ತವೆ. ಮಹಾಸಭೆಯು ಸದರಿ ಅಂದಾಜು ಮುಂಗಡ ಪತ್ರವನ್ನು ಅನುಮೋದಿಸಲು ಸಭೆಯಲ್ಲಿ ಮಂಡಿಸಿದೆ.

# ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ.

## 2010–2024 ಹದಿನೈದು ವರ್ಷಗಳ ಪ್ರಗತಿಯ ಪಕ್ಷಿ ನೋಟ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ವಿವರ | 2009-10 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|---|---|---|---|---|---|---|---|---|
| 1. | ಸದಸ್ಯರು | 3167 | 2836 | 2851 | 2854 | 2949 | 3091 | 3231 | 3347 | 3507 | 3596 | 3651 | 3716 | 3785 | 3892 | 4106 |
| 2. | ಷೇರು ಬಂಡವಾಳ | 83.41 | 90.36 | 99.00 | 99.59 | 92.57 | 102.52 | 112.06 | 117.68 | 134.60 | 154.71 | 154.38 | 148.21 | 157.06 | 177.64 | 191.42 |
| 3. | ನಿಧಿಗಳು | 837.17 | 917.17 | 949.97 | 811.42 | 921.66 | 1020.31 | 1076.96 | 1145.23 | 1197.87 | 1254.91 | 1316.25 | 1416.83 | 1510.46 | 1613.89 | 1728.06 |
| 4. | ಠೇವಣಿಗಳು | 2157.88 | 2262.05 | 2188.25 | 2438.91 | 2150.46 | 2063.64 | 2301.62 | 2719.84 | 3043.79 | 4069.72 | 4473.09 | 5370.56 | 5841.96 | 6788.57 | 7258.34 |
| 5. | ಸಾಲ ಮತ್ತು ಮುಂಗಡಗಳು | 1419.84 | 1876.56 | 2015.80 | 1599.67 | 1393.47 | 1472.83 | 1846.36 | 1898.11 | 2220.87 | 3382.69 | 3536.16 | 3405.96 | 3204.63 | 3675.78 | 4956.89 |
| 6. | ಪಡೆದ ಸಾಲಗಳು | 3.62 | -- | - | - | - | 68. 00 | - | - | - | - | - | - | - | - | - |
| 7. | ದುಡಿಯುವ ಬಂಡವಾಳ (ಕೋಟಿ ರೂ.ಗಳಲ್ಲಿ) | 29.45 | 32.86 | 33.12 | 34.27 | 33.05 | 32.22 | 34.91 | 39.82 | 43.76 | 54.79 | 60.35 | 70.39 | 76.25 | 87.02 | 91.78 |
| 8. | ಗುಂತಾವಣಿಗಳು | 1338.56 | 1134.00 | 1058.81 | 1688.80 | 1744.79 | 1562.55 | 1555.13 | 1863.89 | 2063.49 | 1762.51 | 2121.78 | 2932.54 | 3739.45 | 4585.52 | 3174.70 |
| 9. | ನಿವ್ವಳ ಲಾಭ | 11.57 | 17.40 | 75.28 | 76.81 | 72.57 | 35.98 | 51.39 | 54.62 | 68.42 | 70.02 | 91.83 | 105.35 | 118.25 | 122.82 | 163.74 |
| 10. | ಲಾಭಾಂಶ | * | * | 10% | 10% | 10% | 10% | 10% | 10% | 12% | 15% | - | 15% | 15% | 15% | 15% |
| 11. | ಎನ್.ಪಿ.ಎ.ಪ್ರಮಾಣ (%) | 5.86 | 6.0 | 0 | 0.81 | 0% | 0% | 0% | 0% | 0% | 0% | 1.49% | 0% | 1.47% | 0% | 0.3% |